# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 32 No. 3 JANUARY 2023 Pages 16 Rs. 2/-





**FORTHCOMING EVENTS :**

Havyaka Picnic on 22nd January 2023, Sunday | Venue : Bhat Farm

Shri Karki Venktaramana Shastri Suri Award Presentation Ceremony on 19th February 2023, Sunday | Venue : Gokul Hall, From : 10:00 am onwards

(Details Inside)


*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

| | | |
|---|---|---|
| ***Hon. Editor*** | : | Smt. Amita S. Bhagwat |
| ***Editorial Committee*** | | Smt. Shashikala Hegde<br>Smt. Tanuja Hegde<br>Shri Umesh Hegde<br>Shri Ganesh Bhat<br>Smt. Shailaja Hegde |
| ***Publisher*** | : | Narayan Akadas R.<br>Hon. Gen. Secretary |
| ***Printed at*** | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Sanjay Bhat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | Vasant Bhat |
| ***Hon. Treasurer*** | : | Gautam Upadhya |

***Elected Members :***

| | |
|---|---|
| Smt. Tanuja Hegde | G. S. Bhat |
| Smt. Shashikala Hegde | Vishnu Bhagwat |
| Ramana Bhat | Ramesh Vaidya |
| Umesh Hegde | Chidanand Bhagwat |
| Anant Bhat | |

***Co-opted Members :***
Chandrashekhar Joshi, G. V. Hegde

***ಸಂಪಾದಕೀಯ***

# ಮುಷ್ಟಿಯಲ್ಲಿ ಹಿಡಿದರೆ ಮಾತ್ರ



ಹೊಸ ವರ್ಷ ಇಣುಕಿ ನೋಡುತಿದೆ. ಉರಿಬಿಸಿಲಿನ ಝಳಕ್ಕೆ ಅನೇಕ ಗಿಡಗಳು ಒಣಗಿ ಹೋದರೂ ಮಳೆಯ ಹನಿಗಳ ಸಿಂಚನದಿಂದ, ಒದ್ದೆ ಮಣ್ಣಿನ ಹರ್ಷ ಹಸಿರಾಗಿ ಉಕ್ಕುತ್ತದೆಯಲ್ಲವೇ? ಹಾಗೆಯೇ ಹೊಸದಾಗಿ ಆಗಮಿಸಿದ ವೈರಾಣುವಿನ ಭೀತಿಯ ಪೊರೆಯನ್ನು ಕಳಚಿಟ್ಟಿದ್ದ 2022; ವೈರಾಣುವಿನ ವಿರುದ್ಧ ಹೋರಾಟದಲ್ಲಿ ಸೋತು ನಮ್ಮಿಂದ ದೂರವಾದವರ ಬಗೆಗಿನ ನೋವನ್ನು ತನ್ನ ಮಡಿಲಿನಲ್ಲಿಟ್ಟುಕೊಂಡರೂ, ಹೊಸ ಭರವಸೆಯನ್ನು, ಭದ್ರತೆಯನ್ನು ನೀಡಿತು. ಹೀಗಾಗಿ 2022 ಕಳೆದಿದ್ದೇ ತಿಳಿಯಲಿಲ್ಲ.

ನಿಜವಾದ ಅರ್ಥದಲ್ಲಿ ಸಮಯ ಕಳೆಯುವುದಿಲ್ಲ. ಅದು ತನ್ನಷ್ಟಕ್ಕೆ ತಾನು ಚಲಿಸುತ್ತಿರುತ್ತದೆ. ನಮ್ಮ ಮನಸ್ಸಿನ ಭಾವನೆಗೆ ಅನುಸಾರವಾಗಿ ಹಿಗ್ಗುತ್ತದೆ; ಕುಗ್ಗುತ್ತದೆ. ನಾವು ಗಟ್ಟಿಯಾಗಿ ಮುಷ್ಟಿಯಲ್ಲಿ ಹಿಡಿದರೆ ಮಾತ್ರ ನಮ್ಮ ಕೈಗೆ ಸಿಗುತ್ತದೆ. ಇಲ್ಲದಿದ್ದರೆ ದೂರವೇ ನಿಂತು ಮುಸಿ ಮುಸಿ ನಗುತ್ತದೆ.

ನಿಜ, ಎಷ್ಟೋ ಸಲ ನಾವು 'ನನಗೆ ಮಾಡಬೇಕೆಂದು ತುಂಬಾ ಆಸೆಯಿತ್ತು. ಆದರೆ ಸಮಯವೇ ಸಿಗುವುದಿಲ್ಲ' ಎಂದು ಗೊಣಗಾಡುತ್ತೇವೆ. ನಮ್ಮ ಸಂಬಂಧಿಕರನ್ನೋ, ಸ್ನೇಹಿತರನ್ನೋ ಭೆಟ್ಟಿಯಾಗಲು ಪುರುಸೊತ್ತಾಗುವುದಿಲ್ಲ ಎಂದು ಗೋಳಾಡುತ್ತೇವೆ. ಅಷ್ಟೇ ಏಕೆ? ಚಿಕ್ಕ ಮಕ್ಕಳೂ ಕೂಡ 'ಎಷ್ಟೊಂದು ಹೋಮ್‌ವರ್ಕ್, ಆಟವಾಡಲೂ ಟೈಮ್ ಸಿಗುವುದಿಲ್ಲ' ಎಂದು ಮುಖ ವಾರೆ ಮಾಡುತ್ತಾರೆ.

ಸಮಯ ಸಿಗುವುದಿಲ್ಲ ಎನ್ನುವಂತಹ ಆಭಾಸ ಇನ್ನೊಂದಿಲ್ಲ. ಸಮಯವನ್ನು ದುಡ್ಡುಕೊಟ್ಟು ಖರೀದಿಸಬೇಕು ಎಂದೇನಿಲ್ಲವಲ್ಲ! ಏನಾದರೂ ಮಾಡಲು ಸಮಯವಿಲ್ಲ ಎಂದರೆ ಆ ವಿಷಯ ನಮಗೆ ಮಹತ್ವದ್ದಲ್ಲ ಎಂದಾಯಿತು. ಯಾರನ್ನಾದರೂ ಭೇಟಿಯಾಗಲು ಸಮಯವಿಲ್ಲ ಎಂದರೆ ಅವರು ನಮಗೆ ಹತ್ತಿರದವರಲ್ಲ ಎಂದು ಅರ್ಥವಾಗುತ್ತದೆ.

ನಮ್ಮ ಜೀವನದ ಆದ್ಯತೆಗಳನ್ನು ಅರ್ಥ ಮಾಡಿಕೊಳ್ಳದೇ, ಲಹರಿ ಬಂದಂತೆ ಸಾಗುವುದೆಂದರೆ ಸಮಯದ ಗತಿಯೊಂದಿಗೆ ನಾವು ಚಲಿಸುತ್ತಿಲ್ಲ ಎಂದರ್ಥ. ಇಂದು ಮಾಡಿದ ಕೆಲಸದ ಬಗ್ಗೆ ನಾಳೆ ಪಶ್ಚಾತ್ತಾಪಪಟ್ಟರೆ ನಾವು ಸಮಯದ ಸದುಪಯೋಗ ಪಡೆದುಕೊಂಡಿಲ್ಲ ಎನ್ನುವುದನ್ನು ತೋರಿಸುತ್ತದೆ. ಅದಕ್ಕೇ ನಾವು ಮಾಡುವ ಕೆಲಸಕ್ಕೂ, ಸಮಯಕ್ಕೂ ನಿಕಟವಾದ ಸಂಬಂಧವಿದೆ.

2023 ಬರುತ್ತಿದೆ ಎಂದರೆ ಅದು ಹೊಸ ಸಾಧ್ಯತೆಗಳನ್ನು ನಮ್ಮ ಎದುರಿಗೆ ತೆರೆದಿಡುತ್ತಿದೆ. ಮಾಡಬೇಕು ಎಂದುಕೊಂಡಿದ್ದರೂ, ಯಾವುದೋ ಹಿಂಜರಿಕೆಯಿಂದ ಕೈಗೆತ್ತಿಕೊಳ್ಳದ ಕೆಲಸವನ್ನು ಪ್ರಾರಂಭಿಸೋಣ. ಪ್ರಾರಂಭಿಸಿದ ಕೆಲಸವನ್ನು ಸಮರ್ಪಕವಾಗಿ, ನಿರ್ದಿಷ್ಟ ಕಾಲಾವಧಿಯಲ್ಲಿ ಮುಗಿಸುವುದರ ಬಗ್ಗೆ ಯೋಜನೆಯನ್ನು ಹೆಣೆಯೋಣ. ಎಲ್ಲರೊಂದಿಗೆ ಬೆರೆತು, ಒಂದಾದ ಮನಸುಗಳೊಂದಿಗೆ ಜತೆ ಜತೆಯಲ್ಲಿ ನಡೆಯೋಣ. 2023ನೇ ಇಸವಿಯನ್ನು ಅರ್ಥಪೂರ್ಣಗೊಳಿಸೋಣ.

***Wishing you all Happy 2023.***

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY : **SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

ರಜಪೂತರಲ್ಲಿ ಈ ರಕ್ಷಾಬಂಧನದ ಪ್ರಚಾರವು ವಿಶೇಷವಾಗಿದೆ. ತಂಗಿಯು ಇದನ್ನು ಅಣ್ಣನಿಗೆ ಕಟ್ಟುವಳು. ತನ್ನ ಗಂಡನೊಡನಾದರೂ ಯುದ್ಧ ಮಾಡುವ ವೈರಿಯ (ಅಣ್ಣನ) ಕೈಗೆ ಈ ಹೆಂಗಸರು ರಕ್ಷಾಬಂಧ ಮಾಡುವುದಕ್ಕಾಗಿ ನಿರ್ಭಯವಾಗಿ ರಣ ಭೂಮಿಯಲ್ಲಿ ಹೋಗಿ ಕಟ್ಟುತ್ತಿದ್ದರು. ಇದರಿಂದ ಪರಸ್ಪರ ದ್ವೇಷಭಾವವು ಕಡಿಮೆಯಾಗಿ ಬಹುಮಟ್ಟಿಗೆ ಮೈತ್ರಿಗೆ ಅನುವಾಗುತ್ತಿತ್ತೆಂದು ಹೇಳುತ್ತಾರೆ.

ಧರ್ಮಕೃತ್ಯಗಳ ಪ್ರಾರಂಭದಲ್ಲಿ ಧಾರಣ ಮಾಡುವ ಪವಿತ್ರವೆಂಬ ದರ್ಭೆಯು ಪಾವಿತ್ರ್ಯ ಭಾವನೆಗೆ ಸಾಧನವಾಗಿರುವಂತೆ ಈ ಪವಿತ್ರಾರೋಪಣವೂ ಈ ಭಾವನೆಯನ್ನುಂಟು ಮಾಡುವದು. ಇಡೀ ವರ್ಷ ದೇವತಾ ಪೂಜೆಯಲ್ಲುಂಟಾದ ನ್ಯೂನಾತಿರೇಕಗಳು ಈ ಪವಿತ್ರಾರೋಪಣದಿಂದ ದೂರಾಗಿ ನಮಗೆ ಪೂಜಾಫಲವು ದೊರೆಯಬೇಕೆಂಬುದೇ ಇದರ ಉದ್ದೇಶವಾಗಿ ತೋರುತ್ತದೆ.

**ನಾರಳೀ ಪೌರ್ಣಿಮಾ –** ಹಿಂದುಸ್ಥಾನದ ಪಶ್ಚಿಮ, ಪೂರ್ವ ಸಮುದ್ರ ದಂಡೆಯಲ್ಲಿರುವ ವ್ಯಾಪಾರೀ ವರ್ಗದವರು ಈ ಪೌರ್ಣಿಮೆಯ ದಿನ ವರುಣ ಪ್ರೀತ್ಯರ್ಥವಾಗಿ ಸಮುದ್ರವನ್ನು ಪೂಜಿಸಿ ಸಮುದ್ರಕ್ಕೆ ತೆಂಗಿನ ಕಾಯಿಗಳನ್ನು ಅರ್ಪಿಸುವ (ಒಗೆಯುವ) ರೂಢಿಯಿರುತ್ತದೆ. ಇದರಿಂದ ಈ ಪೌರ್ಣಿಮೆಗೆ 'ನಾರಳೀ ಪೌರ್ಣಿಮಾ' ಎಂತಲೂ ಅನ್ನುವರು. ವ್ಯಾಪಾರೀ ವರ್ಗದವರಿಗೆ ಇದು ವಿಶೇಷ ಮಹತ್ವದ್ದಾಗಿದೆ. ಮುಂಬೈಯಂಥ ದೊಡ್ಡ ವ್ಯಾಪಾರೀ ಕೇಂದ್ರಸ್ಥಳದಲ್ಲಿ ಈ ರೂಢಿಯು ವಿಶೇಷ ವಿಜೃಂಭಣೆಯಿಂದ ಆಚರಿಸಲ್ಪಡುವದು. ಈ ಆಚರಣೆಯಿಂದ ವರುಣ ದೇವರು ಪ್ರೀತನಾಗಿ ಸಮುದ್ರ ಮಾರ್ಗವಾಗಿ ನಡೆಯುವ ವ್ಯಾಪಾರವು ನಿರ್ವಿಘ್ನವಾಗಿ ಸಾಗಬೇಕೆಂಬದೇ ಇದರ ಉದ್ದೇಶವು. ಮಳೆಯ ವೇಗವು ಜ್ಯೇಷ್ಠ, ಆಷಾಢ, ಶ್ರಾವಣ ಶುದ್ಧ 15 ವರೆಗೆ ಇದ್ದಷ್ಟು ಮುಂದಿರದೆ ಈ ಪೌರ್ಣಿಮೆಯು ನಂತರ ಜಲಮಾರ್ಗದಿಂದ ವ್ಯಾಪಾರವು ಪ್ರಾರಂಭವಾಗುವದು. ಈ ರೂಢಿಯು ಹಿಂದೂ ಜನರ ಜಲಮಾರ್ಗದ ವ್ಯಾಪಾರವನ್ನು ಸೂಚಿಸುತ್ತದೆ. ಈ ಪ್ರಕಾರ ಜಲಮಾರ್ಗದಿಂದ ಪ್ರವಾಸ, ವ್ಯಾಪಾರಗಳು ಬಹು ಪ್ರಾಚೀನ ಕಾಲದಿಂದಲೂ ಹಿಂದುಸ್ಥಾನದಲ್ಲಿ ರೂಢವಾಗಿತ್ತೆಂಬುದಕ್ಕೆ ಸುಮಾತ್ರಾ, ಜಾವಾ ಮೊದಲಾದ ದ್ವೀಪಗಳಲ್ಲಿರುವ ಹಿಂದೂ ದೇವಾಲಯಗಳೇ ಸಾಕ್ಷಿಗಳಾಗಿವೆ. ಇದಲ್ಲದೆ ಚಂದ್ರಗುಪ್ತನ ದರ್ಬಾರದಲ್ಲಿರುವ ಗ್ರೀಕ ವಕೀಲನಾದ ಮೆಗಾಸ್ಥೆನೀಸನು ಬರೆದಿಟ್ಟ ಹಿಂದುಸ್ಥಾನದ ಮಾಹಿತಿಯಲ್ಲಿ ಪ್ರಸಿದ್ಧವಾದ ಬಂದರಗಳ ವರ್ಣನೆ ಮಾಡಿದ್ದಾನೆ. ಇವನು ಕ್ರಿ.ಪೂ. 400 ರ ಸುಮಾರಿಗೆ ಹಿಂದುಸ್ಥಾನದಲ್ಲಿದ್ದನು. ಅಂದ ಮೇಲೆ ಹೀಗೆರಡು ಸಾವಿರ ವರ್ಷಗಳ ಮೊದಲು ಹಿಂದುಸ್ಥಾನದ ಉತ್ತಮೋತ್ತಮ ವಸ್ತುಗಳನ್ನು ಹಡಗುಗಳ ಮೇಲಿಂದ ಒಯ್ದು ಪರಸ್ಥಳದಲ್ಲಿ ಮಾರುತ್ತಿದ್ದರೆಂದು ಸಿದ್ಧವಾಗುತ್ತದೆ. ಆದರೆ ಈ ಪ್ರಕಾರದ ಸಂಬಂಧದಿಂದುಂಟಾಗುವ ಧರ್ಮಗ್ಲಾನಿಯನ್ನು ಕಂಡೋ ಏನೋ ಆಗಿನ ಧರ್ಮಾಭಿಮಾನಿಗಳು ಹಿಂದೂ ಜನರು ಪರಕೀಯರೊಡನೆ ಯಾವುದೂ ಸಂಬಂಧವಿಡಬಾರದೆಂಬ ಮತವುಳ್ಳವರಾದರು; ಇದೇ ಸ್ಮೃತಿಗಳಲ್ಲಿ ಕಂಡು ಬರುವುದು. ಆದರೆ ಈಗಿನ ಪರಿಸ್ಥಿತಿಯಿಂದ ಈ ಪ್ರವಾಸವು ಪುನಃ ಅನಿವಾರ್ಯವಾಗಿ ಪ್ರಚಾರಕ್ಕೆ ಬರಹತ್ತಿದೆ.



ಈ ಪೌರ್ಣಿಮೆಯ ದಿನ **ಹಯಗ್ರೀವಾವತಾರ** ವಾಯಿತು. ಆ ಕಥೆಯ ಸಾರಾಂಶ-ಒಮ್ಮೆ ಮಹಾವಿಷ್ಣುವು ದೈತ್ಯರೊಡನೆ ಬಹು ಕಾಲ ಯುದ್ಧ ಮಾಡಿ ದಣಿದು ವಿಶ್ರಾಂತಿಗೋಸ್ಕರ ಪ್ರಶಾಂತವಾದ ಒಂದು ಸ್ಥಳದಲ್ಲಿ ತನ್ನ ಧನುಸ್ಸಿನ ಒಂದು ತುದಿಯನ್ನು ಭೂಮಿಯಲ್ಲೂರಿ ಇನ್ನೊಂದು ತುದಿಯನ್ನು ತಲೆಗಿಂಬಾಗಿ ಮಾಡಿಕೊಂಡು ಮಲಗಿದನು. ಗಾಢ ನಿದ್ದೆ ಹತ್ತಿತ್ತು. ಬ್ರಹ್ಮಾದಿ ದೇವತೆಗಳು ಯಜ್ಞ ಮಾಡಬೇಕೆಂದು ವಿಷ್ಣುವನ್ನು ಹುಡುಕುತ್ತ ಆತನು ಮಲಗಿದ್ದ ಸ್ಥಳಕ್ಕೆ ಬಂದರು. ಬ್ರಹ್ಮನು ಆತನನ್ನು ಎಬ್ಬಿಸಲು ವರಲೆಹುಳ (ವಮ್ರಿ)ಗಳನ್ನು ನಿರ್ಮಿಸಿದನು. ಅವು ಮಹಾವಿಷ್ಣುವಿನ ತಲೆಗಿಂಬಾಗಿದ್ದ ಧನುಸ್ಸಿನ ಬುಡವನ್ನು ಕತ್ತರಿಸಿದರೆ ಆ ಧನಸ್ಸು ಕೆಳಗೆ ಬಿದ್ದು ವಿಷ್ಣುವಿಗೆ ಎಚ್ಚರಾಗಬಹುದೆಂದು ಆ ದೇವತೆಗಳು ತಿಳಿದಿದ್ದರು. ಆ ಹುಳಗಳು ಅದರಂತೆ ಮಾಡಿದವು. ಆದರೆ ಧನಸ್ಸು ಬೀಳುವಾಗ ಅದರ ಬಲವಾದ ಹೊಡೆತದಿಂದ ವಿಷ್ಣುವಿನ ತಲೆಯು ಕತ್ತರಿಸಿ ಹಾರಿ ಹೋಯಿತು; ಮುಂಡವು ಮಾತ್ರ ಉಳಿಯಿತು. ದೇವತೆಗಳೆಲ್ಲಾ ಕಂಗೆಟ್ಟು ದುಃಖಿಸಹತ್ತಿದರು. 'ಹಯ (ಕುದುರೆಯ) ಶೀರ್ಷವನ್ನು ಹಚ್ಚಿದರೆ ವಿಷ್ಣುವು ಚೇತರಿಸುವನು' ಎಂದು ಅಶರೀರವಾಣಿಯಾಯಿತು. ವಿಶ್ವಕರ್ಮನು ಕುದುರೆಯ ಮೊಗವನ್ನು ತಂದು ವಿಷ್ಣುವಿನ ಕಳೇವರಕ್ಕೆ ಅಂಟಿಸಿದನು. ಕೂಡಲೆ ವಿಷ್ಣುವು ಎದ್ದು ನಿಂತು ಎಲ್ಲರನ್ನೂ ಸಂತೋಷಗೊಳಿಸಿದನು. ಇದೇ ಹಯಗ್ರೀವಾವತಾರವು. ಆ ಕಾಲಕ್ಕೆ ಹಯಗ್ರೀವನೆಂಬ ದೈತ್ಯನೊಬ್ಬನು ವರವನ್ನು ಪಡೆದು ಗರ್ವಿಷ್ಠನಾಗಿ ಸಕಲ ಪ್ರಾಣಿಗಳನ್ನೂ ಪೀಡಿಸಹತ್ತಿದನು. ಈ ಹಯಗ್ರೀವಾವತಾರಿಯಾದ ಮಹಾವಿಷ್ಣುವು ಆತನನ್ನು ಸಂಹರಿಸಿದನು.

ಈ ಮಾಸದ ಕೃಷ್ಣ ಚತುರ್ಥಿಯಿಂದ ಪ್ರಾರಂಭಿಸಿ ಯಾವಜ್ಜೀವ ವಾಗಲಿ, ಇಪ್ಪತ್ತೊಂದು ವರ್ಷವಾಗಲಿ, ಒಂದು ವರ್ಷವಾಗಲಿ ಸಂಕಷ್ಟ ಚತುರ್ಥೀ ವ್ರತವನ್ನು ಆಚರಿಸಬೇಕು. ಅಶಕ್ತರಾದವರು ಪ್ರತಿವರ್ಷ ಶ್ರಾವಣ ಕೃ. 4ನೆಯ ದಿನವಾದರೂ ಈ ವ್ರತವನ್ನು ಮಾಡಬೇಕು.

**ಶ್ರೀ ಕೃಷ್ಣಜನ್ಮಾಷ್ಟಮಿ –** ಈ ದಿನ ಪ್ರಾತಃ ಕಾಲದಲ್ಲಿ ನಿತ್ಯಕರ್ಮಗಳನ್ನು ತೀರಿಸಿ ಶ್ರೀಕೃಷ್ಣ ಪ್ರೀತ್ಯರ್ಥವಾಗಿ ಕೃಷ್ಣಾಷ್ಟಮೀ ವ್ರತವನ್ನಾಚರಿಸುವೆನೆಂದು ಸಂಕಲ್ಪ ಮಾಡಬೇಕು. ಹಗಲು ಉಪೋಷಣ ಮಾಡಿದ್ದು ಮಧ್ಯ ರಾತ್ರಿಯಲ್ಲಿ ಶ್ರೀಕೃಷ್ಣನ ಮೂರ್ತಿಯನ್ನು ಷೋಡಶೋಪಚಾರಗಳಿಂದ ಪೂಜಿಸುವುದು. ಶ್ರೀಕೃಷ್ಣ ಪ್ರತಿಮೆಯನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಬಂಗಾರ, ಬೆಳ್ಳಿ, ತಾಮ್ರ ಮೊದಲಾದ ಧಾತುಗಳಿಂದಾಗಲಿ, ಮಣ್ಣಿನಿಂದಾಗಲಿ ಮಾಡಬೇಕು. ಅಥವಾ ಗೋಡೆಯ ಮೇಲೆ ಚಿತ್ರದ ಪ್ರತಿಮೆಯನ್ನಾದರೂ ಪೂಜಿಸಬೇಕು. ತಮ್ಮ ತಮ್ಮ ಕುಲಾಚಾರವಿದ್ದಂತೆ ಪ್ರತಿಮೆಗಳನ್ನು ರಚಿಸುವ ಕ್ರಮವನ್ನೂ ಹೇಳಿದ್ದಾರೆ. ವಸುದೇವ, ದೇವಕಿ, ನಂದ, ಯಶೋದಾ, ಶ್ರೀಕೃಷ್ಣ, ರಾಮ, ಚಂಡಿಕಾ ಈ ಪ್ರಕಾರ ಏಳು ಪ್ರತಿಮೆಗಳವರೆಗೆ ಮಾಡುವ ವಿಧಿಯು ಹೇಳಲ್ಪಟ್ಟಿದೆ. ಮಧ್ಯರಾತ್ರಿಯೇ ಜನ್ಮ ಕಾಲವಾದ್ದರಿಂದ ಅದೇ ಮುಖ್ಯ ಪೂಜಾಕಾಲವು. ಇದರಲ್ಲಿ ಜನ್ಮಾಷ್ಟಮೀ ಉತ್ಸವವೆಂದೂ, ಮಾರನೇ ದಿನ ಜಯಂತ್ಯುತ್ಸವವೆಂದೂ ಎರಡು ವಿಭಾಗವಾಗಿ ಹೇಳಿದ್ದಾರೆ. ಈ ಉತ್ಸವಕ್ಕೆ 'ಗೋಕುಲಾಷ್ಟಮಿ' ಎಂದೂ ಹೇಳುವರು.

*(ಮುಂದುವರಿಯುವುದು)*

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

# ಕಾಳಿದಾಸನನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮಂಡಿಕಲ್ ರಾಮಾಶಾಸ್ತ್ರಿ (1849-1926) : ಮೇಘಪ್ರತಿಸಂದೇಶ :** ಸಂಸ್ಕೃತದ ವ್ಯಾಖ್ಯಾನ ಶೈಲಿಯನ್ನನುಸರಿಸಿ, ವಿವರವಾದ ವ್ಯಾಖ್ಯೆಗಳುಳ್ಳ ಮೇಘಪ್ರತಿಸಂದೇಶ ಒಟ್ಟು 166 ಪದ್ಯಗಳನ್ನೊಳಗೊಂಡಿದೆ. ಇದು ಎರಡು ಸರ್ಗಗಳಲ್ಲಿ ವಿಸ್ತಾರಗೊಂಡಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಹಾಗೂ ದಶಮ ಚಾಮರಾಜ ಒಡೆಯರು, ಚತುರ್ಥ ಕೃಷ್ಣರಾಜ ಒಡೆಯರು ಮೊದಲಾದ ಕರ್ನಾಟಕದ ಪ್ರಸಿದ್ಧ ಅರಸರಿಂದ ಸಮ್ಮಾನಿತರಾದ ಮಂಡಿಕಲ್ ರಾಮಶಾಸ್ತ್ರಿಯವರು ಇದನ್ನು ರಚಿಸಿದ್ದಾರೆ. ಈ ಕಾವ್ಯ ಕವಿಕಾಳಿದಾಸನ ಮೂಲ ಮೇಘದೂತ ಕಾವ್ಯದಿಂದ ಪ್ರೇರಣೆ ಹೊಂದಿ ಮೂಡಿಬಂದ ಹೊಸ ಸೃಷ್ಟಿಯಾಗಿದೆ. ಕಾಳಿದಾಸನ ಮೇಘದೂತ ಕಾವ್ಯದಲ್ಲಿ ಯಕ್ಷನ ಸಂದೇಶವನ್ನು ಹೊತ್ತು ಅಲಕೆಗೆ ಹೋಗುವ ಮೋಡ ನಡುವೆ ರಾಮಗಿರಿಯಿಂದ ವಿದಿಶಾ, ಉಜ್ಜಯಿನಿ, ಹಿಮವತ್ಪರ್ವತವೇ ಮೊದಲಾದ ಪ್ರದೇಶಗಳನ್ನು ದಾಟಿ ಉತ್ತರಾಭಿಮುಖವಾಗಿ ತೆರಳಿದರೆ, ಮೇಘಪ್ರತಿಸಂದೇಶದಲ್ಲಿ ಶಾಸ್ತ್ರಿಗಳ ಮೇಘ, ಯಕ್ಷಿಣಿಯಿಂದ ಪ್ರತಿಸಂದೇಶವನ್ನು ಹೊತ್ತು ಅಲಕೆಯಿಂದ ದಕ್ಷಿಣಾಭಿಮುಖಿಯಾಗಿ ಜಯಪುರ, ಜೋಧಪುರ, ವಿಜಯನಗರ ಸಾಮ್ರಾಜ್ಯವನ್ನೂ ದಾಟಿ ಪೆನಗೊಂಡೆ, ಶಾಸ್ತ್ರಿಗಳ ಜನ್ಮಭೂಮಿ ಮಂಡಿಕಲ್ ಹಾಗೂ ಅವರ ವಾಸಸ್ಥಾನ ಮೈಸೂರಿಗೂ ಬರುತ್ತದೆ. ಅರಮನೆಯ ಸುತ್ತಲಿರುವ ತ್ರಿಣೇಶ್ವರ, ವರಾಹಸ್ವಾಮಿ, ಕೃಷ್ಣಸ್ವಾಮಿ ದೇವಾಲಯಗಳ ಮೇಲೂ ಸುತ್ತು ಹಾಕುತ್ತದೆ.

ಇನಿಯಳ ವಿಯೋಗದಿಂದ ವಿಹ್ವಲನಾಗಿದ್ದ ಯಕ್ಷನಿಂದ ಇಂತು ಬೇಡಲ್ಪಟ್ಟಿದ್ದ ಮೇಘವು, ಗಾಳಿಯೆಂಬ ರಥದ ಮೂಲಕ ದಾರಿಯನ್ನು ವೇಗವಾಗಿ ಕ್ರಮಿಸಿ, ಅಲಕಾಪಟ್ಟಣಕ್ಕೆ ಬಂದು ಪ್ರಿಯತಮನು ಹೇಳಿಕಳಿಸಿದ್ದ ಸಂದೇಶವನ್ನೆಲ್ಲ ಆತನ ಪ್ರೇಯಸಿಗೆ ತಲುಪಿಸಿತು. ಈ ಲೋಕದಲ್ಲಿ ಸಜ್ಜನರು ಇತರರ ಬೇಡಿಕೆಯನ್ನು ವ್ಯರ್ಥಗೊಳಿಸುವುದಿಲ್ಲವಷ್ಟೇ! ಎಂಬ ಪದ್ಯದಿಂದ ಮೊದಲನೆಯ ಸರ್ಗ ಪ್ರಾರಂಭವಾಗುತ್ತದೆ. ಅದು ಇಂತಿದೆ.

ಯಕ್ಷೇಣೈವಂ ವಿರಹವಿಧುರೇಣಾರ್ಥಿತ ಸ್ತೋಯವಾಹಃ
ತೀರ್ತ್ವಾ ಮಾರ್ಗಾನ್ ಸರಯಮಲಕಾಮೇತ್ಯ ವಾತ್ಯಾರಥೇನ ।
ತತ್ಪ್ರೇಯಸ್ಯೈ ಪ್ರಿಯನಿಗದಿತಾ ಸರ್ವಮಪ್ಯಾಚಚಕ್ಷೇ
ಲೋಕೇ ಸಂತೋ ನಹಿ ಖಲು ಪರಪ್ರಾರ್ಥನಾ ವ್ಯರ್ಥಯಂತಿ ॥

ರಾಮಶಾಸ್ತ್ರಿಗಳು ಕ್ರಿಯಾವಿರಹಿತವಾದ ಬುದ್ಧಿ ವ್ಯರ್ಥ, ಗುಣವಿಲ್ಲದ ರೂಪ ವ್ಯರ್ಥ, ಹಣವಿಲ್ಲದವನ ಸುಖೋಪಭೋಗದ ಹಂಬಲ ವ್ಯರ್ಥ, ಆರೋಗ್ಯವಿಲ್ಲದವನ ಐಸಿರಿ ವ್ಯರ್ಥ, ಸತ್ಯವಿಲ್ಲದ ಮಾತು ವ್ಯರ್ಥಎಂಬ ನೀತಿಯನ್ನು ಸುಂದರವಾಗಿ ಬಣ್ಣಿಸಿದ್ದಾರೆ.

ದೂರೀಭೂತೇ ದಯಿತ ಭವತಿ ತ್ವಾಂ ವಿನಾಹಂ ವ್ಯಥಾ ಸಂ
ನಿರ್ಯತ್ನಾಧೀರಿವ ವಿರಹಿತೇವಾಕೃತಿಸ್ಸದ್ಗುಣೇನ ।
ಭೋಗೇಚ್ಛೇವ ದ್ರವಿಣರಹಿತಾ ಶ್ರೀರಿವಾರೋಗ್ಯಶೂನ್ಯಾ
ವಾಣೀ ಸತ್ಯಾದಿವ ವಿಗಲಿತಾ ಶ್ರೂಯತಾಂ ಮದ್ದಶಾಪಿ ॥



ಎಲೈ ಪ್ರಿಯತಮನೇ! ನೀನು ದೂರ ಹೋಗಲಾಗಿ ನಾನು ಕ್ರಿಯಾವಿರಹಿತವಾದ ಬುದ್ಧಿಯಂತೆ, ಒಳ್ಳೆಯ ಗುಣವಿಲ್ಲದ ಅಂದದ ಆಕೃತಿಯಂತೆ, ಹಣವಿಲ್ಲದ ಸುಖೋಪಭೋಗ ಪಡೆಯಬೇಕೆಂಬ ಹಂಬಲದಂತೆ, ಆರೋಗ್ಯವಿಲ್ಲದ ಐಸಿರಿಯಂತೆ ಮತ್ತು ಸತ್ಯಶೂನ್ಯವಾದ ಮಾತಿನಂತೆ ವ್ಯರ್ಥವಾಗಿ ಬದುಕಿಕೊಂಡಿದ್ದೇನು. ನನ್ನ ದುರವಸ್ಥೆಯನ್ನು ಕೇಳು..ಎಂದು ಯಕ್ಷಿಣಿ ತನ್ನ ಪ್ರಿಯಕರನಿಗೆ ನುಡಿಯುತ್ತಾಳೆ.

ಕಾಳಿದಾಸನು ಉಜ್ಜಯಿನಿ ನಗರವನ್ನು ತನ್ನ ಕಾವ್ಯದಲ್ಲಿ ವರ್ಣಿಸಿದಂತೆ, ಶಾಸ್ತ್ರಿಯವರು ತಾವು ನೆಚ್ಚಿದ ಮೈಸೂರು ನಗರವನ್ನು ವರ್ಣಿಸಿದ ಪರಿ ಸೊಗಸಾಗಿದೆ.

ತತ್ರೋತ್ಕೀರ್ಣಾಚಲ ಇವ ಮಹದ್ ರಾಜತೇ ರಾಜಗೇಹಮ್
ಹೇಷಾಘೋಷೈಃ ಮದಗಜಮದೈಃ ಪೂರಿತಪ್ರಾಂಗಣಾಢ್ಯಮ್ ।
ವಿದ್ಯುದ್ದೀಪಾಯುತ ಪರಿವೃತೋತ್ತುಂಗ ತದ್ಗೋಪುರಾಗ್ರೇ
ದೃಶ್ಯಂ ದೂರಾದಪಿ ನಿಶಿ ಮಹದ್ದೀಪಮಾಣಿಕ್ಯಮಿಂಧೇಃ ॥

ಆ ಮೈಸೂರಿನಲ್ಲಿ ದೊಡ್ಡ ಅರಮನೆಯು ಕಂಗೊಳಿಸುತ್ತಿದೆ. ಬೆಟ್ಟವೊಂದನ್ನು ತಂದು ಕಡೆದು ಕೆತ್ತಿ ನಿಲ್ಲಿಸಿದಂತೆ ಅದು ತೋರುತ್ತದೆ. ಅದರ ಅಂಗಳವು ಮದ್ದಾನೆಗಳ ಮದೋದಕ ಮತ್ತು ಕುದುರೆಗಳ ಕೆನೆತದಿಂದ ತುಂಬಿರುತ್ತದೆ. ಲಕ್ಷ ಲಕ್ಷ ವಿದ್ಯುದ್ದೀಪಗಳಿಂದ ಅಲಂಕೃತವಾಗಿರುವ ಆ ಉನ್ನತ ಭವನದ ಗೋಪುರದ ದೃಶ್ಯವು ರಾತ್ರಿಯಲ್ಲಿ ದೂರದಿಂದಲೇ ಮಾಣಿಕ್ಯದ ಕಾಂತಿಯಿಂದ ಜಗಮಗಿಸುತ್ತದೆ.

ಹೀಗೆಯೇ, ಮೈಸೂರಿನ ಆಡಳಿತಕ್ರಮ ಅಲ್ಲಿಯ ವಿದ್ಯಾಭ್ಯಾಸ, ಗ್ರಂಥಾಲಯಗಳು, ದೇವಾಲಯಗಳು ಮೊದಲಾದ ಸಂಗತಿಗಳ ಯಥಾರ್ಥ ವರ್ಣನೆಗಳು ಈ ಕಾವ್ಯದಲ್ಲಿ ದೊರೆಯುತ್ತವೆ. ಕೇರಳದ ಕಾಲಟಿಯನ್ನು ವರ್ಣಿಸುವ ಸಂದರ್ಭದಲ್ಲಿ ಜಗದ್ಗುರು ಆದಿಶಂಕರರನ್ನು ಕುರಿತ ಶ್ಲೋಕ ಅತ್ಯಂತ ಮನೋಜ್ಞವಾಗಿದೆ.

ಆಚಾರ್ಯತ್ವಂ ಸಕಲ ಜಗತಾಂ ಸಾರ್ಥಯನ್ನಾವಿರಾಸೀತ್
ತತ್ರಾನಾದಿಃ ತ್ರಿಭುವನಗುರುಃ ಶಂಕರಃ ಸ್ವಾಭಿಧಾನಾತ್ ।
ಮೂಲಾಜ್ಞಾನಾಭಿಧವಿಷತರೋಃ ಮೂಲಘಾತಂ ವಿತನ್ವನ್
ಚಕ್ರೇ ಮೋಕ್ಷಾಭಿಧಮಣಿಗೃಹಾರೋಹ ನಿಶ್ರೇಣಿಕಾಂ ಯಃ ॥

ಆ ಕಾಲಟಿಯಲ್ಲಿ ಮೂರು ಲೋಕಗಳ ಅಧಿಪತಿಯಾದ ಪರಶಿವನು ಶಂಕರ ಎಂಬ ಹೆಸರಿನಿಂದ ಹುಟ್ಟಿ ಇಡಿಯ ಜಗತ್ತಿನ ಆಚಾರ್ಯತ್ವವನ್ನು ಸಾರ್ಥಕಪಡಿಸಿಕೊಂಡನು. ಸಂಸಾರವೆಂಬುದಕ್ಕೆ ಮೂಲ ಕಾರಣವಾದ ಅವಿದ್ಯೆಯೆಂಬ ವಿಷವೃಕ್ಷದ ಬೇರನ್ನೇ ನಾಶಪಡಿಸುತ್ತಾ ಮೋಕ್ಷವೆಂಬ ಮಣಿಗೃಹವನ್ನೇರಲು ಅಗತ್ಯವಾದ ಮೆಟ್ಟಿಲ ಮಾರ್ಗವನ್ನು (ಪ್ರಸ್ಥಾನತ್ರಯ ಭಾಷ್ಯವನ್ನು ಬರೆಯುವುದರ ಮೂಲಕ) ಉಂಟು ಮಾಡಿದನು ಎಂಬರ್ಥದ

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

ಈ ಶ್ಲೋಕದಲ್ಲಿ ಆಧ್ಯಾತ್ಮ ತತ್ವವನ್ನು ಬೋಧಿಸುವುದರ ಜೊತೆಯಲ್ಲಿ ಉತ್ತಮವಾದ ಉಪಮಾಲಂಕಾರವನ್ನು ಕವಿ ಹೆಣೆದಿದ್ದಾರೆ. ಮೈಸೂರು ಅರಸರ ಆಸ್ಥಾನ ಕವಿಯಾಗಿದ್ದ ರಾಮಶಾಸ್ತ್ರಿಗಳಿಗೆ ಅಲ್ಲಿನ ಅರಸರ ದಕ್ಷ ಆಡಳಿತದ ಬಗೆಗೆ ಹೆಮ್ಮೆಯಿತ್ತು ಎಂಬ ಸಂಗತಿಯೂ ಕಾವ್ಯದ ವರ್ಣನೆಗಳಲ್ಲಿ ಹೆಚ್ಚಾಗಿ ಮೂಡಿಬಂದಿದೆ.

ಶ್ರುತ್ವಾ ಯಕ್ಷೀವಚನನಿಚಯಂ ಯಕ್ಷರಾಜೋ ದಯಾರ್ದಃ
ತತ್ಪ್ರಾಣೇಶಂ ಸಪದಿ ಸುರಥೇನಾನಯದ್ರಾಮದುರ್ಗಾತ್ ।
ಶಾಪಹ್ರಾಸಾತ್ ಪ್ರಮುದಿತಧಿಯೌ ದಂಪತೀ ತೌ ಸಮೇತೌ
ಗೇಹೇ ಸ್ವೀಯೇ ಪುನರಪಿ ಪುರೇವಾನ್ವಭೂತಾಂ ಸುಖಾನಿ ॥

ಯಕ್ಷಪತ್ನಿಯು ಮೇಘದ ಮೂಲಕ ಕಳುಹಿಸಿದ ಸಂದೇಶವನ್ನು ತನ್ನ ಗೂಢಚಾರರ ಮೂಲಕ ತಿಳಿದು ದಯಾರ್ದ್ರನಾದ ಕುಬೇರನು ಆ ಕೂಡಲೇ ತನ್ನ ಉತ್ತಮ ರಥವೊಂದನ್ನು ಕಳುಹಿಸಿ ಆಕೆಯ ಪ್ರಾಣನಾಥನನ್ನು ರಾಮಗಿರಿಯಿಂದ ಅಲಕಾ ಪಟ್ಟಣಕ್ಕೆ ಕರೆಸಿದನು. ಶಾಪವು ಕಡಿಮೆ ಯಾದುದರಿಂದ ಆನಂದ ಪರವಶರಾದ ಆ ದಂಪತಿಗಳು ಪುನಃ ಮೊದಲಿನಂತೆಯೇ ತಮ್ಮ ನಿವಾಸದಲ್ಲಿ ಸುಖೋಪಭೋಗಗಳನ್ನು ಒಟ್ಟಿಗೆ ಅನುಭವಿಸಿದರು ಎಂದು ಕಾವ್ಯವು ಸುಖಾಂತವಾಗಿ ಮುಕ್ತಾಯಗೊಳ್ಳುತ್ತದೆ.

ಮಹಾಕವಿ ಕಾಳಿದಾಸ ವಿರಚಿತ ಮೊದಲನೆಯ ಸಂದೇಶ ಕಾವ್ಯ ಮೇಘದೂತ ರಚಿತವಾಗಿ ಸುಮಾರು ಎರಡು ಸಾವಿರ ವರ್ಷಗಳ ನಂತರ ಪ್ರತಿಸಂದೇಶ ಕಾವ್ಯವನ್ನು ರಚಿಸಿದ ರಾಮಶಾಸ್ತ್ರಿಗಳ ವಿದ್ವತ್ ಪ್ರತಿಭೆ ಅಗಾಧವಾದುದು. ಅವರ ಕಲ್ಪನಾ ವಿಲಾಸವೂ ಅಸಾಮಾನ್ಯವಾದುದು. ಕಾಳಿದಾಸಾಂಗೀಕೃತ ಮಂದಾಕ್ರಾಂತ ವೃತ್ತದಲ್ಲೇ ಕಾವ್ಯವನ್ನು ಹೆಣೆದಿರುವುದು, ಯಕ್ಷ ಯಕ್ಷಿಯರನ್ನು ಚಿತ್ರಗ್ರೀವ ಸ್ವರ್ಣಮಾಲೆಯೆಂಬ ಹೆಸರಿನಿಂದ ಗುರುತಿಸಿರುವುದು ಇವರ ಕಾವ್ಯದ ಇನ್ನೊಂದು ವೈಶಿಷ್ಟ್ಯವಾಗಿದೆ. ಸಂದೇಶವನ್ನು ಹೊತ್ತುಹೋಗುವ ಮೋಡಕ್ಕೆ ಕಾಳಿದಾಸನು 'ಮಾ ಭೂದೇವಂ ಕ್ಷಣಮಪಿ ಚ ತೇ ವಿದ್ಯುತಾ ವಿಪ್ರಯೋಗಃ' (ಒಂದು ನಿಮಿಷವೂ ನಿನ್ನ ಪ್ರಿಯೆ ಮಿಂಚಿನಿಂದ ಎಂದೂ ಬೇರೆಯಾಗುವುದು ಬೇಡ) ಎಂದು ನುಡಿದರೆ, ಶಾಸ್ತ್ರಿಗಳು, 'ಸೌದಾಮಿನ್ಯಾ ಸಹ ವಿಚರ ತೇ ಸಂತು ಸನ್ಮಂಗಲಾನಿ'(ನಿನ್ನ ಪ್ರಿಯೆ ಸೌದಾಮಿನಿಯೊಂದಿಗೆ ನೀನು ಎಂದೆಂದಿಗೂ ಒಟ್ಟಾಗಿ ಸಂಚರಿಸು. ನಿನಗೆ ಸಕಲ ಸನ್ಮಂಗಲಗಳೂ ಉಂಟಾಗಲಿ) ಎಂದು ಆಶಿಸುತ್ತಾರೆ. ಇವರ ಕೃತಿಯನ್ನು ಆಸ್ಥಾನ ವಿದ್ವಾನ್ ಕವಿರತ್ನ ಮಂಡಿಕಲ್ ರಾಮಾಶಾಸ್ತ್ರಿ ಪ್ರತಿಷ್ಠಾನದವರು ಕ್ರಿ.ಶ. 2000ದ ಇಸ್ವಿಯಲ್ಲಿ ಪ್ರಕಾಶಕ್ಕೆ ತಂದರು. ಮೇಘಪ್ರತಿ ಸಂದೇಶ ಕಾವ್ಯವನ್ನು ಕನ್ನಡಕ್ಕೆ ಅನುವಾದ ಮಾಡಿದವರು ಡಾ. ಎಸ್. ಆರ್. ಲೀಲಾರವರು.

ಶಾಸ್ತ್ರಿಗಳ ಇತರ ಕೃತಿಗಳು ಚಾಮರಾಜ ಚಂಪೂ, ಕೃಷ್ಣರಾಜಾಭ್ಯುದಯ, ನಳನೃಪಚರಿತೆ ಅಲ್ಲದೇ ಆರ್ಯ ಧರ್ಮಪ್ರಕಾಶಿಕಾ, ಭಗವದ್ಪ್ರಾರ್ಥನೆ, ಕುಂಭಾಭಿಷೇಕ ಚಂಪೂ, ಭೈಮೀಪರಿಣಯ ನಾಟಕ, ಕಥಾಸಪ್ತಶತಿ ಮೊದಲಾದ ಅಮೂಲ್ಯ ಕೃತಿಗಳು ಬೆಳಕು ಕಂಡು ಇಂಗ್ಲೀಷ್, ಹಿಂದಿ ಮೊದಲಾದ ಇತರ ಭಾಷೆಗಳಲ್ಲಿ ತರ್ಜುಮೆಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಪ್ರಕಟಣೆಗೆ ಕಂಕಣಬದ್ಧವಾದ ಆಸ್ಥಾನ ವಿದ್ವಾನ್ ಕವಿರತ್ನ ಮಂಡಿಕಲ್ ರಾಮಾಶಾಸ್ತ್ರಿ ಪ್ರತಿಷ್ಠಾನ ಸ್ತುತ್ಯಾರ್ಹವಾಗಿದೆ.

*(ಮುಂದುವರಿಯುವುದು)*

## ಹವ್ಯಕರ ವಾರ್ಷಿಕ ಸಭೆಯಲ್ಲಿ ಆಯೋಜಿಸಿದ ಪಾಕ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗಳಿಸಿದ ಖಾದ್ಯ (ಸಿಹಿ) / ಖಾದ್ಯ (ಖಾರ)

### ಅವಲಕ್ಕಿ ಪಾಯಸ

**ಬೇಕಾಗುವ ಸಾಮಗ್ರಿಗಳು** : ½ ಲೀಟರ್‌ಹಾಲು, 1 ಸಣ್ಣ ಕಪ್ ದಪ್ಪ ಅವಲಕ್ಕಿ, ½ ಕಪ್ ಸಕ್ಕರೆ ಅಥವಾ ಬೆಲ್ಲ + ಗೋಡಂಬಿ + ಏಲಕ್ಕಿ ಪುಡಿ / ಚಿಟಿಕೆ ಕೇಸರಿ, 1 ಚ. ತುಪ್ಪ.

**ಮಾಡುವ ವಿಧಾನ** : ಮೊದಲು ಅವಲಕ್ಕಿಯನ್ನು ತೊಳೆದು ನೀರನ್ನು ಬಗ್ಗಿಸಿಕೊಳ್ಳಬೇಕು. ಹಾಲನ್ನು ಗ್ಯಾಸ್‌ನ ಮೇಲೆ ಕುದಿಯಲು ಇಡಬೇಕು. ಹಾಲು ಕಾದ ನಂತರ ಅದಕ್ಕೆ ತೊಳೆದಿಟ್ಟ ಅವಲಕ್ಕಿಯನ್ನು ಹಾಕಿ ತಿರುವಬೇಕು. ಹತ್ತು ನಿಮಿಷಗಳಲ್ಲಿ ಅವಲಕ್ಕಿ ಬೇಯುತ್ತದೆ. ನಂತರ ಅದಕ್ಕೆ ಸಕ್ಕರೆ / ಬೆಲ್ಲವನ್ನು ಬೆರೆಸಬೇಕು. ಜೊತೆಗೆ ಕೇಸರಿ/ಏಲಕ್ಕಿ ಪುಡಿ ಹಾಕಬೇಕು. ಇದು ಚೆನ್ನಾಗಿ ಕುದಿದ ಮೇಲೆ ಉರಿಯಿಂದ ಕೆಳಗಿಳಿಸಿ ತುಪ್ಪದಲ್ಲಿ ಹುರಿದ ಗೋಡಂಬಿಯನ್ನು ಸೇರಿಸಿದರೆ ರುಚಿಯಾದ ಅವಲಕ್ಕಿ ಪಾಯಸ ಸವಿಯಲು ಸಿದ್ಧ.

**– ಶ್ರೀಮತಿ ಶಾಂತಾ ಭಟ್, ಚಾರ್‌ಕೋಪ್**

***

### ಅವಲಕ್ಕಿ ತಾಳಿಪಿಟ್ಟು

**ಬೇಕಾಗುವ ಸಾಮಗ್ರಿಗಳು** : ಅವಲಕ್ಕಿ 1 ಕಪ್, 3 ಚಮಚ ಅಕ್ಕಿ ಹಿಟ್ಟು, ಗಜ್ಜರಿ, ಹಸಿಮೆಣಸು, ಕೊತ್ತಂಬರಿ ಸೊಪ್ಪು, ಈರುಳ್ಳಿ, ಶುಂಠಿ, ಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು.

**ಮಾಡುವ ವಿಧಾನ** : ಅವಲಕ್ಕಿಯನ್ನು ಚೆನ್ನಾಗಿ ತೊಳೆದು ಸ್ವಲ್ಪ ನೀರು ಹಾಕಿ 10 ನಿಮಿಷ ನೆನೆಸಿ. ನಂತರ ನೀರನ್ನು ಬಸಿದು ಕೊಳ್ಳಿ. ಅಕ್ಕಿ ಹಿಟ್ಟು ಬೆರೆಸಿ ಚೆನ್ನಾಗಿ ನಾದಿ ಕಲೆಸಿಕೊಳ್ಳಿ. ಗಜ್ಜರಿ ತುರಿ, ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಹಸಿಮೆಣಸು ಮತ್ತು ಉಳಿದೆಲ್ಲಾ ಸಾಮಾಗ್ರಿಗಳನ್ನು ಬೆರೆಸಿ ಮೃದುವಾದ ಹಿಟ್ಟನ್ನು ತಯಾರಿಸಿಕೊಂಡು ಕಾದ ಹೆಂಚಿನ ಮೇಲೆ ತೆಳುವಾಗಿ ಹಚ್ಚಿ ಸಣ್ಣ ಉರಿಯಲ್ಲಿ ಎರಡೂ ಕಡೆ ಬೇಯಿಸಿ. ತೆಂಗಿನ ಕಾಯಿ ಚಟ್ನಿ ಜೊತೆ ಬಿಸಿ ಬಿಸಿಯಾಗಿ ಸವಿಯಿರಿ.

**– ಶ್ರೀಮತಿ ಉಷಾ ಭಟ್, ಕೊಡ್ಲೆಕೆರೆ, ಬೊರಿವಿಲಿ**

***

# ಓಡದ ಕಾಲಿನ ಕನಸುಗಳು

✍ ಶಶಿಕಲಾ ಹೆಗಡೆ, ಮುಂಬಯಿ

"ಅಮ್ಮಾ, ಆ ಕೆಂಪು ಬಣ್ಣವನ್ನೂ ಹಾಕಲು ಹೇಳಮ್ಮಾ" ಪುಟ್ಟ ಕಾರ್ತಿಕ ನಿಗೆಂದು ಗೋಲಾವಾಲಾ ಗೋಲಾದ ತಯಾರಿಯಲ್ಲಿ ತೊಡಗಿದ್ದ. ಹಳದಿ, ಹಸಿರು, ಕೇಸರಿ, ನಸುಗೆಂಪು ಬಣ್ಣಗಳನ್ನು ಒಂದಾದ ಮೇಲೆ ಒಂದರಂತೆ ಆ ಐಸಿನ ಮುದ್ದೆಗೆ ಸೇರಿಸುತ್ತಲಿದ್ದ. ಆ ಕಡೆ ಬಣ್ಣ ಸೇರಿದಂತೆ ಈ ಕಡೆ ಕಾರ್ತಿಕನ ಮುಖದ ಮೇಲಿನ ನಗು ಹೆಚ್ಚಾಗುತ್ತಾ ಹೋಗುತ್ತಿತ್ತು. ಥಟ್ಟನೆ, ಅಯ್ಯೋ ಈ ಗೋಲಾವಾಲ ಮಾಮಾ ಕೆಂಪು ಬಣ್ಣವನ್ನು ಹಾಕದೇ ಇದ್ದರೆ, ಎಂದು ಗಾಬರಿಯಾಗಿ ಅಮ್ಮನನ್ನು ಎಚ್ಚರಿಸಿದ್ದ ಕಾರ್ತಿಕ.

ಮುಂಬಯಿಯ ಉಪನಗರವೊಂದರಲ್ಲಿ ವಾಸಿಸುವ ಈ ಕಾರ್ತಿಕ್‌ನಿಗೆ ದಿನಕ್ಕೊಂದು ಹೆಸರಿನ ನಾಮಕರಣ ಅಪ್ಪ, ಅಮ್ಮನಿಂದ. ಪುಟ್ಟ, ಪೋಕರಿ, ಅಮ್ಮಾ ಪುಟ್ಟಿ ಎಂದೆಲ್ಲ ಕರೆಸಿಕೊಳ್ಳುವ ಸಣ್ಣ ಪೋರ ಅವನು. ವಾರಕ್ಕೊಮ್ಮೆ ಯಾದರೂ ಅಮ್ಮನ ಜೊತೆ ಮಾರ್ಕೆಟ್ಟಿನ ಕಡೆ ಸವಾರಿ ಹೊರಡುವುದು ವಾಡಿಕೆ. ಹಾಗೆ ತಿರುಗಾಡಲು ಹೋದಾಗಲೆಲ್ಲಾ ತನಗೆ ಗೋಲಾ ಬೇಕೆಂದು ಅಮ್ಮನನ್ನು ಪೀಡಿಸಿ ಕಾಡಿಸುವುದೂ ಕೂಡ ವಾಡಿಕೆಯೇ. "ಅದೆಲ್ಲ ಒಳ್ಳೆಯದಲ್ಲ" ಎಂದು ಅಮ್ಮ ಮುದ್ದಿನಿಂದಲೇ ಗದರಿಸುವುದೂ ಕೂಡ ವಾಡಿಕೆಯೇ ಆಗಿಬಿಟ್ಟಿದೆ. ಕಟ್ಟು ನಿಟ್ಟಿನ, ಶಿಸ್ತಿನ ಸಿಪಾಯಿಯಂತಿದ್ದ ಅಮ್ಮ ಇಂದು ಗೋಲಾ ಕೊಡಿಸಲು ರಾಜಿಯಾಗಿದ್ದಳು. ಕಾರ್ತಿಕನ ಖುಷಿಯನ್ನು ಕೇಳಬೇಕೇ? ಸುತ್ತಮುತ್ತ ಓಡಾಡುತ್ತಿದ್ದ ಗಾಡಿಗಳೊಂದೂ ಅವನಿಗೆ ಕಾಣುತ್ತಿರಲಿಲ್ಲ. ಡಬಲ್ ಡೆಕ್ಕರ್ ಬಸ್ ಎದುರಿಗೆ ಹಾದುಹೋದರೆ ಕೈತಟ್ಟಿ ಖುಷಿ ಪಡುತ್ತಿದ್ದ ಅವನಿಗೆ ಇಂದು ಅದ್ಯಾವುದರ ಕಡೆಗೂ ಗಮನವಿಲ್ಲ. ಅವನು ಕಣ್ಣು ಹಾಯಿಸಿದಲ್ಲೆಲ್ಲ ಅವನಿಗೆ ಕಾಣುವುದು ರಂಗು ರಂಗಿನ ಗೋಲಾಗಳು. ಇಂದು ಅಪ್ಪ ಬರುವವರೆಗೂ ಎಚ್ಚರಿರಬೇಕು. 'ನಿಂಗೆ ಗೋಲಾ ಇಲ್ಲ' ಎಂದು ಅಪ್ಪನಿಗೆ 'ಟೇಂಗಾ' ತೋರಿಸಿ ಹಿಯಾಳಿಸಿ ನಗಬೇಕು ಎನ್ನುವ ಪ್ಲಾನೂ ಅವನ ತಲೆಯಲ್ಲಿ ಗಿರಕಿ ಹೊಡೆಯುತಿತ್ತು. ಅರ್ಜುನನ ಗುರಿ ಮೀನಿನ ಕಣ್ಣಿನ ಮೇಲೆಯೇ ಇತ್ತಂತೆ, ಹಾಗೆಯೇ ಕಾರ್ತಿಕನ ಗಮನವೆಲ್ಲವೂ ಈಗ ಗೋಲಾದ ಮೇಲೆ. ಇನ್ನೇನು ತಯಾರಾದ ಗೋಲಾವನ್ನು ಬಾಯಲ್ಲಿ ಇಡಬೇಕು ಎನ್ನುಷ್ಟರಲ್ಲಿ.....

"ಕಾರ್ತಿಕ್ ಹೊತ್ತಾಯ್ತು ಏಳು, ಅಪ್ಪನ ಜೊತೆ ತಿಂಡಿ ತಿನ್ನಲ್ವಾ? ಅಪ್ಪಂಗೆ ಆಫೀಸಿಗೆ ಹೊತ್ತಾಗುತ್ತೆ, ಮಗಾ ಎದ್ದೊ,"ಎಂಬ ಅಮ್ಮನ ಧ್ವನಿ ಕೇಳಿ ಥಟ್ಟನೆ ಕಣ್ಣು ತೆರೆದ. ಅರೇ! ನನ್ನ ಗೋಲಾ ಎಲ್ಲಿ ಹೋಯ್ತು ಎಂದು ಹುಡುಕಾಡಿದ. ಬಾಯಲ್ಲಿಡುವ ಮೊದಲೇ ಕನಸಿನಲ್ಲೆ ಕರಗಿದ ಗೋಲಾವನ್ನು ನೆನಪಿಸಿಕೊಂಡು ಅಳು ಬರುವಂತಾಯ್ತು. ತಾನೀಗ ಅತ್ತರೆ ಅಪ್ಪ, ಅಮ್ಮ ಏನಾಯ್ತು ಎಂದು ಕೇಳದೇ ಇರುತ್ತಾರೆಯೇ? ಕನಸಿನಲ್ಲಿ ಕಂಡದ್ದನ್ನೆಲ್ಲ ಅವರಿಗೆ ಹೇಳಿದರೆ ನಕ್ಕೇ ನಗುತ್ತಾರೆ. ಅದಕ್ಕಿಂತ ಸುಮ್ಮನೆ ಎದ್ದು ಅಪ್ಪನ ಜೊತೆ ತಿಂಡಿ ತಿನ್ನುವುದು ಒಳ್ಳೆಯದು ಎನ್ನುತ್ತ ಗಡಿಬಿಡಿಯಿಂದ ಎದ್ದು ಅಪ್ಪನು ಮುಂದೊಡ್ಡಿದ ಕೈಗಳಿಗೆ ತನ್ನ ಪುಟ್ಟ ಕೈಗಳನ್ನು ಸೇರಿಸಿ ಹಲ್ಲುಜ್ಜಲು ತೆರಳಿದ. ಮುಖ ತೊಳೆದು ಬರುವಷ್ಟರಲ್ಲಿ ಅಮ್ಮ ಬೆಳ್ಳನೆಯ ಇಡ್ಲಿಗಳನ್ನು ಪ್ಲೇಟಿನಲ್ಲಿ ಹಾಕಿ ಇಟ್ಟಿದ್ದಳು. ಪುಟ್ಟನಿಗೆ ಪುಟಾಣಿ ಇಡ್ಲಿಗಳು. ಜೊತೆಗೆ ತುಪ್ಪಬೆಲ್ಲ ಬೆರೆಸಿಟ್ಟಿದ್ದಳು. ಅಪ್ಪನ ಪ್ಲೇಟಿನಲ್ಲಿ ಇಡ್ಲಿಯ ಜೊತೆ ಚಟ್ನಿ. ಅಮ್ಮ ಹಾಲು ಮತ್ತು ಚಹಾ ತರಲು ಒಳಗಡೆ ಹೋದೊಡನೆ ಅಪ್ಪ ಒಂದು ಚೂರು ಇಡ್ಲಿಗೆ ಚಟ್ನಿಯನ್ನು ತಾಗಿಸಿ ಪುಟ್ಟನ ಬಾಯಲ್ಲಿ ಇಟ್ಟು ಬಿಟ್ಟ. "ಹಾ" ಖಾರದ ಚಟ್ನಿ ನಾಲಿಗೆಗೆ ತಾಗಿದೊಡನೆ ಕಾರ್ತಿಕನಿಗೆ ಅರಿವಿಲ್ಲದೆಯೆ ಒಂದು ಸಣ್ಣ ಚೀತ್ಕಾರ ಹೊರಬಿದ್ದಿತು."ಅದ್ಯಾರು ಅದು, ಪುಟ್ಟನಿಗೆ ಚಟ್ನಿ ತಿನ್ನಿಸಿದವರು?" ಒಳಗಿನಿಂದ ಒಡನೆಯೇ ಅಮ್ಮನ ಏರುಧ್ವನಿ ಕೇಳಿಬಂತು. ಕಣ್ಣು ಮಿಟುಕಿಸಿ ನಕ್ಕ ಅಪ್ಪನ ಮುಖವನ್ನೇ ನೋಡುತ್ತಾ "ಇಲ್ಲಪ್ಪಾ ಇಲ್ಲ, ಅಪ್ಪ ಚಟ್ನಿ ಕೊಡಲೇ ಇಲ್ಲ" ಕಿಸಿಕಿಸಿ ನಗುತ್ತ ಉತ್ತರಿಸಿದ ಕಾರ್ತಿಕ. "ಅಪ್ಪ ಮಗನ ಕಾರಸ್ಥಾನ ನನಗೆ ತಿಳಿಯದೇ? ನೀವಿಬ್ಬರೂ ಒಂದೇ" ಎಂದು ನಗುತ್ತಾ ಬಂದ ಅಮ್ಮ ಮೆತ್ತಗೆ ಇಬ್ಬರ ಕಿವಿಯನ್ನು ಹಿಂಡಿದಳು. ಕಿವಿಯೇ ಕಿತ್ತು ಬಂತೇನೋ ಎಂಬಂತೆ ಇಬ್ಬರ ಚೀರಾಟ. ಮರುಗಳಿಗೆಯಲ್ಲೇ 'ಹೋ' ಎಂಬ ನಗು. ಯಾರಿಗುಂಟು ಯಾರಿಗಿಲ್ಲ ಇಂತಹ ಸಂಸಾರ ಸುಖ. ಅಪ್ಪ ಅಮ್ಮನ ಮಡಿಲಲ್ಲಿ ಕಾರ್ತಿಕ ಪರಮಸುಖಿ.



ತಿಂಡಿ ತಿಂದು ತಯಾರಾಗಿ ಅಪ್ಪ ಆಫೀಸಿಗೆ ಹೊರಟನೆಂದರೆ ಇನ್ನು ಬರುವುದು ಸರಿರಾತ್ರಿಗೇ ಸರಿ. ಒಂದೊಂದು ದಿನ ಪುಟ್ಟ ಅಪ್ಪನಿಗಾಗಿ ಕಾದು ಕಾದು ಸುಸ್ತಾಗಿ ನಿದ್ದೆ ಮಾಡಿಬಿಡುತ್ತಿದ್ದ. ಅದಕ್ಕೆಂದೇ ಅಪ್ಪ ಆಫೀಸಿಗೆ ಹೋಗುವಾಗಲೇ ಪುಟ್ಟನಿಗೆ ಚಾಕಲೇಟ್ ಕೊಟ್ಟು ಹೋಗುತ್ತಿದ್ದ. ಇದಕ್ಕೆಂದೇ ಕಾರ್ತಿಕ್ ಕಾತುರದಿಂದ ಕಾಯುತ್ತಿದ್ದ. ದಿನ ದಿನವೂ ಬೇರೆ ಬೇರೆ ಬಣ್ಣದ ಚಾಕಲೇಟ್, ಅದಕ್ಕೆ ಬದಲಾಗಿ ಕಾರ್ತಿಕ್ ಅಪ್ಪನಿಗಾಗಿ ಒಂದು ಪುಟ್ಟ ಕೆಲಸ ಮಾಡಬೇಕಾಗುತ್ತಿತ್ತು, ಹೆಚ್ಚು ಕಷ್ಟದ ಕೆಲಸವೇನಲ್ಲ, ಅಪ್ಪನ ಕುತ್ತಿಗೆಯನ್ನು ಗಟ್ಟಿಯಾಗಿ ಬಳಸಿ ಕೆನ್ನೆಗೆ ಗಲ್ಲಕ್ಕೆ ಮುತ್ತು ಕೊಡಬೇಕಾಗಿತ್ತು ಅಷ್ಟೇ! ಚಾಕಲೇಟ್ ಕೈಗೆ ಸಿಕ್ಕೊಡನೆ ಫ್ರಿಜ್ಜಿನ ಬಾಗಿಲು ತೆಗೆದು ತನ್ನ ಚಾಕಲೇಟ್ ಡಬ್ಬ ತೆಗೆದು ಅದರೊಳಗೆ ಚಾಕಲೇಟ್‌ನ್ನು ತುಂಬಿ ಭದ್ರವಾಗಿ ಮುಚ್ಚಿ ಮತ್ತೆ ಫ್ರಿಜ್ಜಿನೊಳಗೆ ಇಟ್ಟು ಬಿಡುತ್ತಿದ್ದ. ಚಾಕಲೇಟ್‌ನ್ನು ಮುಟ್ಟಿನೋಡುವ ಭಾಗ್ಯ ಮಾತ್ರ ಅವನಿಗಿತ್ತು. ತಿಂದು ಆನಂದಿಸುವ ಅದೃಷ್ಟ ಅವನಿಗಿರಲಿಲ್ಲ. ಅಮ್ಮ ಯಾವತ್ತೂ ಹೇಳುತ್ತಿದ್ದ ಮಾತು ಪುಟ್ಟನ ಮನಸ್ಸಿನಲ್ಲಿ ಮನನವಾದಂತೇ ಇತ್ತು. "ಡಾಕ್ಟರ್ ಮಾಮಾ ಹೇಳಿದ್ದಾರೆ, ನೀನು ಚಾಕಲೇಟ್, ಐಸ್‌ಕ್ರೀಮ್ ಎಲ್ಲಾ ತಿನ್ನದೇ ಇದ್ರೆ ಬೇಗ ಬೇಗ ನಡೆದಾಡೋದಕ್ಕೆ ಕಲಿಸ್ತಾರಂತೆ. ಆಮೇಲೆ ನಿಂಗೆ ಎಲ್ಲಾ ತಿನ್ನೋಕೆ ಕೊಡ್ತೀನಿ. ಅಲ್ಲಿ ತನಕ ಡಾಕ್ಟರ್‌ಮಾಮಾ ಹೇಳಿದಂತೆ ಕೇಳ್ಬೇಕು "ಎಂದು ತಿಳಿಸಿ ಹೇಳಿದ್ದಳು. ಅಮ್ಮ ತನಗೆ ಹೇಳಿದ ಮಾತುಗಳನ್ನು ತನ್ನ ಮುದ್ದು ಭಾಷೆಯಲ್ಲಿ ಅಪ್ಪನಿಗೆ ಹೇಳಿದಾಗ ಯಾಕೋ ಅಪ್ಪ ಪುಟ್ಟನ ಕಣ್ತಪ್ಪಿಸಿ ಕಣ್ಣೀರನ್ನು ಒರೆಸಿಕೊಂಡಿದ್ದರು.

ಪುಟ್ಟನ ಚಾಕಲೇಟ್ ಡಬ್ಬಿ ಒಂದು ಚಿಕ್ಕ ಇತಿಹಾಸದ ಪುಸ್ತಕ ಇದ್ದಂತೆ. ಅದರ ಪ್ರತಿಯೊಂದು ಪುಟಗಳು ಅವನಿಗೆ ಚಿರಪರಿಚಿತ. ತನಗೆ ಯಾರು ಚಾಕಲೇಟ್ ಕೊಟ್ಟರೂ ಡಬ್ಬಿಯಲ್ಲಿ ತುಂಬಿ ಇಡುತ್ತಿದ್ದ. ಅಷ್ಟೇ ಅಲ್ಲದೆ ಮನೆಗೆ ಯಾವ ನೆಂಟರು ಬಂದರೂ ಅವರೆದುರಿಗೆ ತನ್ನ ಚಾಕಲೇಟ್‌ನ ಖಜಾನೆಯನ್ನು ತೆರೆದು ಇಡುತ್ತಿದ್ದ. ಪ್ರತಿಯೊಂದು ಚಾಕಲೇಟ್‌ನ್ನು ಯಾರು ತಂದು ಕೊಟ್ಟಿದ್ದು, ಯಾವಾಗ ತಂದುಕೊಟ್ಟಿದ್ದು ಎಂಬೆಲ್ಲ ವಿವರವನ್ನು ಪಟಪಟನೆ ಹೇಳಿಬಿಡುತ್ತಿದ್ದ. ಆದರೆ ಯಾರಾದರೂ "ನಂಗೊಂದು ಚಾಕಲೇಟ್ ಕೊಡು ಮರಿ" ಎಂದರೆ ಮಾತ್ರ ತನ್ನ ಪ್ರಾಣಪ್ರಿಯವಾದ ಆಸ್ತಿಯನ್ನು ಸರಸರನೆ ಡಬ್ಬಿಯಲ್ಲಿ ತುಂಬಿಕೊಂಡು ಹೊರಟುಬಿಡುತ್ತಿದ್ದ. ತಾನು ನಡೆದಾಡಲು ಕಲಿತ ಮೇಲೆ ಒಂದೊಂದಾಗಿ ಅವನ್ನೆಲ್ಲಾ ತಿನ್ನಬೇಕು ಎನ್ನುವ ಆಸೆ ಅವನಿಗಿರುವುದು ಸಹಜ ತಾನೇ!

PAGE DONATED BY : AKADAS & FAMILY

ಪುಟ್ಟನ ವಯಸ್ಸೇನೋ ಶಾಲೆಗೆ ಸೇರಿಸುವಷ್ಟು ಆಗಿದ್ದರೂ 'ಇಂತಹ ಅಂಗವಿಕಲ ಮಕ್ಕಳನ್ನು ನಮ್ಮ ಶಾಲೆಗೆ ಸೇರಿಸಿಕೊಳ್ಳಲು ಆಗುವುದಿಲ್ಲ' ಎಂಬ ತಿರಸ್ಕಾರದ ಮಾತು ಎಲ್ಲ ಶಾಲೆಗಳಿಂದಲೂ ಕೇಳಲು ದೊರಕಿತ್ತು. ತನ್ನೆಲ್ಲ ಬೇಸರ, ನೋವನ್ನು ನುಂಗಿಕೊಂಡು ಅಮ್ಮ ಮನೆಯಲ್ಲಿಯೇ ಅವನಿಗೆ ಪಾಠ ಹೇಳಿಕೊಡಲು ನಿರ್ಧರಿಸಿದ್ದಳು. ಎಲ್ಲದರಲ್ಲೂ ತುಂಬಾ ಚುರುಕಾಗಿದ್ದ ಅವನು ಅಮ್ಮನು ಹೇಳಿಕೊಟ್ಟ ಅಕ್ಷರಗಳನ್ನು ಓದಲು ಬರೆಯಲು ಕಲಿತಿದ್ದ. ತನ್ನಷ್ಟೇ ದೊಡ್ಡವನಾದ ಪಕ್ಕದ ಮನೆಯ ಹಾರ್ದಿಕ ಯುನಿಫಾರ್ಮ್ ಹಾಕಿಕೊಂಡು, ಮಿರಮಿರ ಮಿಂಚುವ ಶೂಗಳನ್ನು ತೊಟ್ಟುಕೊಂಡು, ಮನೆಯವರಿಗೆ ಬೈ ಎಂದು ಕೈ ಬೀಸುತ್ತಾ ಶಾಲೆಗೆ ಹೋಗುವುದನ್ನು ನಿತ್ಯವೂ ಗ್ಯಾಲರಿಯಿಂದ ಪುಟ್ಟ ನೋಡುತ್ತಾನೆ. ಆದರೆ ತಾನೂ ಶಾಲೆಗೆ ಹೋಗುತ್ತೇನೆ ಎಂದು ಯಾವತ್ತೂ ಹಠ ಮಾಡಿದವನಲ್ಲ. ವಯಸ್ಸಿಗೆ ಮೀರಿದ ತಿಳುವಳಿಕೆ, ಗಾಂಭೀರ್ಯ ಅವನಲ್ಲಿತ್ತು. ಅಮ್ಮ ಒಳಗಡೆ ಕೆಲಸದಲ್ಲಿ ತೊಡಗಿದರೆ ಇವನ ಪ್ರಪಂಚವೇ ಬೇರೆ. ತನ್ನೆಲ್ಲ ಆಟಿಗೆ ಸಾಮಾನುಗಳನ್ನು ಹರಡಿಕೊಂಡು ಒಂಟಿಯಾಗಿ ಆಡುವ ಪರಿಪಾಠ ಅವನಲ್ಲಿ ಬೆಳೆದುಬಿಟ್ಟಿತ್ತು. ಆಟಿಗೆಯ ಟ್ರಕ್‌ನಲ್ಲಿ ಚಿಕ್ಕಪುಟ್ಟ ಸಾಮಾನುಗಳನ್ನು ತುಂಬಿಸಿಕೊಂಡು ಅಡಿಗೆ ಕೋಣೆಯಿಂದ ಪುಟ್ಟ ಗ್ಯಾಲರಿಗೆ ಅವನ ಸವಾರಿ ಸಾಗುತ್ತಿತ್ತು. ಅಲ್ಲಿ ಸಾಮಾನುಗಳನ್ನು ಇಳಿಸಿ, ಮತ್ತೇನೇನೋ ಸಾಮಾನುಗಳನ್ನು ತುಂಬಿಸಿಕೊಂಡು ಅಡಿಗೆಮನೆಯತ್ತ ಮರುಪಯಣ. "ಭಾಭೀ, ಆಪ್‌ಕಾ ಸಾಮಾನ್ ಕುಛ್ ಹೈ ಕ್ಯಾ?" ಎಂದು ಹರುಕು ಮುರುಕು ಹಿಂದಿಯಲ್ಲಿ ಮಾತನಾಡಿ ಅಮ್ಮನನ್ನು ಬೇಕೆಂದೇ ಕೆಣಕುತ್ತಿದ್ದ. ಚಿಕ್ಕ ಚಿಕ್ಕ ಮಿಕ್ಸರ್, ಪಾತ್ರೆಗಳು, ಟೇಬಲ್, ಕುರ್ಚಿ, ಎಲ್ಲವಕ್ಕೂ ಅವನ ಟ್ರಕ್ಕಿನಲ್ಲಿ ಜಾಗವಿರುತ್ತಿತ್ತು. ಕೆಲವೊಮ್ಮೆ ಅಮ್ಮನ ಕಣ್ತಪ್ಪಿಸಿ ಅಡಿಗೆ ಮನೆಯ ಚಮಚ, ಸಣ್ಣ ಸಣ್ಣ ಪ್ಲೇಟುಗಳು, ಉಪ್ಪು ಖಾರದ ಡಬ್ಬಿಗಳು ಕೂಡ ಟ್ರಕ್ಕಿನಲ್ಲಿ ಅಡಗಿ ಕುಳಿತು ಗ್ಯಾಲರಿ ಸೇರಿಬಿಡುತ್ತಿದ್ದವು. ಅಡಿಗೆ ಮನೆಯಲ್ಲಿ ತನಗೆ ಬೇಕಾದ ಸಾಮಾನು ಕಾಣದೇ,ಇವನ ಕಿತಾಪತಿಯ ಅರಿವುಳ್ಳ ಅಮ್ಮ ಹುಸಿಮುನಿಸು ತೋರಿಸುತ್ತ, ಪುಟ್ಟನ ತಲೆಯ ಮೇಲೆ ಮೆತ್ತಗೆ ಮೊಟಕಿ ತನ್ನ ಸಾಮಾನುಗಳನ್ನು ಎತ್ತಿಕೊಂಡು ಹೋಗುತ್ತಿದ್ದಳು. "ದಿನದಿಂದ ದಿನಕ್ಕೆ ತುಂಬಾ ಮಸ್ತಿ ಖೋರನಾಗ್ತಾ ಇದ್ದೀಯ ನೀನು. ಅಪ್ಪನಿಗೆ ಹೇಳಿ ಕೊಡ್ತೇನೆ ಇರು" ಎಂಬ ಗದರಿಕೆಯ ಮಾತು ಕೂಡ ಇರುತ್ತಿತ್ತು. ಆಗೆಲ್ಲ ಅಮ್ಮನ ಮುಖ ನೋಡಿ ಮುಸಿಮುಸಿ ನಗುತ್ತಿದ್ದ. ಅಮ್ಮನ ಪ್ರೀತಿಯನ್ನು ಅವನೇನು ಅರಿಯನೇ!

ಹೆಚ್ಚಿನ ಸಮಯವನ್ನು ಆಟವಾಡುತ್ತಾ ಖುಷಿಯಿಂದ ಕಳೆಯುವ ಪುಟ್ಟನಿಗೆ ಅಮ್ಮ ಎಣ್ಣೆಯ ಬಟ್ಟಲನ್ನು ಹಿಡಿದು ಬಂದರೆ ಮಾತ್ರ ಕಿರಿಕಿರಿ ಯಾಗುತ್ತಲಿತ್ತು. ಕೈ ಕಾಲು ಮೈಗೆಲ್ಲ ಎಣ್ಣೆ ಹಚ್ಚಿ ಮಾಲಿಷ್ ಮಾಡುತ್ತಾ, ಏನಾದರೂ ಕತೆ ಹೇಳುತ್ತಾ "ಅಮ್ಮಾ ಪುಟ್ಟಿ ಈಗ ಎಕ್ಸರೈಜ್ ಮಾಡ್ತಾ" ಎಂದು ಅಮ್ಮ ಹೇಳಿದರೆ ಇಲ್ಲ ಎನ್ನಲು ಪುಟ್ಟನಿಗೆ ಆಗುತ್ತಲೇ ಇರಲಿಲ್ಲ. ಅಮ್ಮ ಮಾಡಿಸುತ್ತಿದ್ದ ವ್ಯಾಯಮವನ್ನೆಲ್ಲ ಚಾಚೂ ತಪ್ಪದೇ ಸುಮ್ಮನೆ ಮಾಡುತ್ತಿದ್ದ. ಅಮ್ಮನಿಗೂ ಗೊತ್ತು, ಮಗನಿಗೆ ಇದು ಇಷ್ಟವಿಲ್ಲ ಎಂದು. ಆದರೆ ಅವಳಿಗೂ ಇದೆಲ್ಲ ಅನಿವಾರ್ಯ. ಬೇಗ ಬೇಗ ಈ ಕೆಲಸವನ್ನು ಮುಗಿಸಿ ಸ್ನಾನ ಮಾಡಿ ಕುಳಿತರೆ, ತನ್ನ ಗೆಳೆಯ ಹಾರ್ದಿಕ್ ಶಾಲೆಯಿಂದ ಬಂದೊಡನೆ ಅವನೊಡನೆ ಆಡಬಹುದು ಎನ್ನುವ ಆಸೆಯೂ ಅವನಿಗೆ. ಹಾರ್ದಿಕ್ ಕೆಲವೊಮ್ಮೆ ಶಾಲೆಯಿಂದ ನೇರವಾಗಿ ಇಲ್ಲಿಗೇ ಬಂದುಬಿಡುತ್ತಿದ್ದ ಯುನಿಫಾರ್ಮ್‌ನ್ನು ಕೂಡ ಬದಲಿಸದೇ. ಆಗೆಲ್ಲ ಅವನ ಅಮ್ಮ ಅವನ ಡ್ರೆಸ್ ಚೇಂಜ್ ಮಾಡಿಸಲೆಂದು ಓಡಿಬರುತ್ತಿದ್ದಳು. ಈ ಮಕ್ಕಳಿಬ್ಬರೂ ಹೊಡೆದಾಡದೇ, ಜಗಳ ಮಾಡದೇ ಚಂದವಾಗಿ ಆಡುವುದನ್ನು ನೋಡುವುದೇ ಅಮ್ಮಂದಿರಿಬ್ಬರಿಗೂ ಖುಷಿಯ ಸಂಗತಿ. ಇಂತಹ ದಿನಗಳಲ್ಲಿ ಹಾರ್ದಿಕನ ಮನೆಯ ಡೋಕ್ಲ, ಥೇಪ್ಲಾ ಇವರ ಮನೆಗೆ ರವಾನೆ ಆಗುತ್ತಿತ್ತು. ಜೊತೆಗೆ ಇವರ ಮನೆಯ ಅನ್ನ, ಸಾಂಬಾರ್,ಇಡ್ಲಿ, ದೋಸೆ ಇತ್ಯಾದಿ. ಎಲ್ಲರೂ ಸೇರಿ ಊಟ ಮಾಡುವಾಗಿನ ಮಜವೇ ಮಜ. ಮಕ್ಕಳಿಬ್ಬರೂ ಹರುಕು ಮುರುಕು ಹಿಂದಿಯಲ್ಲಿ ಮಾತನಾಡುವುದನ್ನು ಕೇಳುತ್ತಾ ನಗುವ ಅಮ್ಮಂದಿರು.

"ಬೆಚ್ಚನಾ ಮನೆಯಿರಲು ವೆಚ್ಚಕ್ಕೆ ಹೊನ್ನಿರಲು ಇಚ್ಚೆಯನರಿವ ಸತಿಯಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ" ಎಂದು ಸರ್ವಜ್ಞನಂತಹ ಜ್ಞಾನಿಗಳು ಹೇಳಿದ್ದಾರೆ. ಪೇಟೆ ಪಟ್ಟಣಗಳಲ್ಲಿ ವಾಸಿಸುವ ಜನರಿಗೆ ಸುಖ ದುಃಖದಲ್ಲಿ ನೆರವಾಗುವ, ಭಾಗಿಯಾಗುವ ನೆರೆಹೊರೆಯವರಿದ್ದರೆ ಸ್ವರ್ಗವೇ ದೊರಕಿದಂತೆ. ಮುಂಬಯಿಯಂತಹ ದೊಡ್ಡ ದೊಡ್ಡ ಶಹರಗಳಲ್ಲಿ ಇತ್ತೀಚೆಗೆ ಕೆಲವು ಗಗನಚುಂಬಿ ಕಟ್ಟಡಗಳಲ್ಲಿ ವಾಸಿಸುವ ಜನರಿಗೆ ತಮ್ಮ ಅಕ್ಕಪಕ್ಕದ ಮನೆಗಳಲ್ಲಿ ಯಾರು ವಾಸಿಸುತ್ತಾರೆ ಎಂಬುದು ಸಹ ಗೊತ್ತಿರುವುದಿಲ್ಲ ಎಂಬುದು ನಿಜ. ನೆರೆ ಹೊರೆಯುವರನ್ನು ಪರಿಚಯಿಸಿಕೊಳ್ಳುವ ಗೊಡವೆಗೂ ಅವರು ಹೋಗುವುದಿಲ್ಲ. ಆದರೆ ಇಂತಹ ನಗರಿಗಳಲ್ಲಿ ಇಂದಿಗೂ ಹೆಚ್ಚಿನ ಜನ ಅಕ್ಕಪಕ್ಕದವರ ತೊಂದರೆ ತೊಡಕುಗಳಿಗೆ ಸಹಾಯ ಮಾಡಲು ಒದಗಿಬರುತ್ತಾರೆ, ಓಡಿಬರುತ್ತಾರೆ. ಈ ರೀತಿಯ ಒಂದು ವಾತಾವರಣವಿರುವುದರಿಂದಲೇ ತಮ್ಮ ಜನರಿಂದ, ಬಂಧು ಬಳಗದವರಿಂದ ದೂರವಿದ್ದರೂ ಒಂಟಿತನ ಜನರನ್ನು ಕಾಡುವುದಿಲ್ಲ. ಆಪತ್ಕಾಲಗಳಲ್ಲೂ ಎದೆಗುಂದದೇ ಎಲ್ಲವನ್ನೂ ಎದುರಿಸುವ ಧೈರ್ಯ ಮೂಡಿಬರುತ್ತದೆ.

ಕಾರ್ತಿಕನ ಅಪ್ಪ ಅಮ್ಮನ ಪರಿಸ್ಥಿತಿಯೂ ಇಂತಹದ್ದೇ. ಮಗನ ಆಗಮನದ ನಂತರ ಎಂತದೇ ಸಂಕಷ್ಟಗಳು ಬಂದರೂ ಸಹಾಯ ಹಸ್ತವನ್ನು ಚಾಚುವವರು, ಸಂತೈಸುವವರು ಅವರ ಸುತ್ತಮುತ್ತ ಇದ್ದರು. ಬಾಲಕೃಷ್ಣನಂತೆಯೇ ಮುದ್ದಾಗಿದ್ದ ಕಾರ್ತಿಕನನ್ನು ನಾಮುಂದು ತಾಮುಂದು ಎಂದು ಅಕ್ಕಪಕ್ಕದವರೆಲ್ಲರೂ ತಮ್ಮ ಮನೆಗೆ ಎತ್ತಿಕೊಂಡು ಹೋಗಿ ಆಡಿಸುತ್ತಿದ್ದರು. ರಾತ್ರಿಯ ವೇಳೆ ಅವನು ಅಳುವ ಸದ್ದೇನಾದರೂ ಕಿವಿಗೆ ಬಿದ್ದರೆ ಏನಾಯ್ತೆಂದು ಕೇಳಲು ಕೂಡಲೇ ಓಡಿ ಬರುತ್ತಿದ್ದರು.

ಸಂಜೆಯಾಗುತ್ತಿದ್ದಂತೆ ಅಮ್ಮ ಪುಟ್ಟನನ್ನು ಬೇಗ ಬೇಗ ರೆಡಿ ಮಾಡಿಸಿ, ಅವಸರವಸರವಾಗಿ ಎತ್ತಿಕೊಂಡು ಓಡುತ್ತಿದ್ದಳು. ಇದು ಕಾರ್ತಿಕನಿಗೆ ಬಹಳ ಇಷ್ಟವಾದದ್ದು. ಬೆಳಿಗ್ಗೆಯಿಂದ ಮನೆಯಲ್ಲೆ ಇರುತ್ತಿದ್ದ ಅವನಿಗೆ ಈಗ ಹೊರಪ್ರಪಂಚದ ಪರ್ಯಟನ. ಅಮ್ಮನ ಕಂಕುಳಿನಲ್ಲಿ ಕುಳಿತು ಸಾಗುವಾಗ ಎಲ್ಲದರ ಕಡೆಯೂ ಕುತೂಹಲದ ನೋಟ. ತನಗೆ ಏನೇ ಹೊಸತು ಕಂಡರೂ ಅದನ್ನು ಅಮ್ಮನಿಗೆ ಹೇಳುವ ಹುಮ್ಮಸ್ಸು, ಹೂಮನಸು. ಒಮ್ಮೊಮ್ಮೆ ಅಮ್ಮ ಅವನ ಕುತೂಹಲದ ಮಾತುಗಳಿಗೆ ಕಿವಿಯಾಗುತ್ತಿದ್ದಳು, ಗಡಿಬಿಡಿಯಲ್ಲಿ ಓಡುವಾಗ ಕೆಲವೊಮ್ಮೆ ಅವನ ಮಾತುಗಳಿಗೂ ಗಮನ ಕೊಡಲಾರಳು. ಅಮ್ಮನ ಓಟವೂ ಪುಟ್ಟನಿಗೆ ಆಟವೇ. ಸುತ್ತಮುತ್ತ ಸಾಗುವವರೆಲ್ಲ ಅಮ್ಮನ ಓಟದ ಕುಲುಕುವಿಕೆಯಿಂದ ಕುಣಿದಂತೆ ಕಂಡು ಅವನಿಗೆ ಖುಷಿಯೋ ಖುಷಿ, ನಗುವೋ ನಗು. ಇವನ ಮುದ್ದು ಮುಖವನ್ನು ನೋಡಿ ದಾರಿಯಲ್ಲಿ ಹೋಗುವವರೆಷ್ಟೋ ಜನ ಇವನ ಕೆನ್ನೆಯನ್ನು ಹಿಂಡಿ, ಮುದ್ದಿಸಿ ಹೋಗುತ್ತಿದ್ದರು. ಇದ್ಯಾವುದರ ಪರಿವೆಯೇ ಇಲ್ಲದ ಅಮ್ಮನ ಚಿಂತೆಯ ದಾರಿಯೇ ಬೇರೇ ಮುಖವಾಗಿ ಸಾಗುತ್ತಿರುತ್ತದೆ. ಎಷ್ಟು ಗಂಟೆಯ ಟ್ರೈನ್ ಸಿಗುವುದೋ? ಡಾಕ್ಟರರ ಕ್ಲಿನಿಕ್‌ನಲ್ಲಿ ಎಷ್ಟುದ್ದ ಲೈನ್ ಇರುವುದೋ? ಎಂಬೆಲ್ಲ ಯೋಚನೆಗಳಲ್ಲಿ ಮುಳುಗಿರುತ್ತಿದ್ದಳು. ಸ್ಟೇಶನ್ ತಲುಪಿದೊಡನೆ ಎತ್ತರದ ಬ್ರಿಡ್ಜನ್ನು ಸರಸರನೆ ಏರಿ ಪ್ಲಾಟ್‌ಫಾರ್ಮಿಗೆ ಮೆಟ್ಟಿಲುಗಳನ್ನು

PAGE DONATED BY : **SHRI ROKESH HEGDE & FAMILY, DAHISAR**

ಪಟಪಟನೆ ಇಳಿಯುವ ವೇಗಕ್ಕೆ ಕುಲುಕಾಡುವ ಪುಟ್ಟನಿಗೆ ಮಜವೊ ಮಜ. ಟ್ರೈನಿನ ಡಬ್ಬಿಯನ್ನು ಒಮ್ಮೆ ಹತ್ತಿಕೊಂಡರೆ ಅಬ್ಬಾ, ಒಂದು ಯುದ್ಧವನ್ನು ಗೆದ್ದಂತೆ. ಕುಳಿತುಕೊಳ್ಳಲು ಸೀಟು ಸಿಕ್ಕರೆ ಭಾಗ್ಯವೋ ಭಾಗ್ಯ. ಇಲ್ಲವಾದರೆ ಹ್ಯಾಂಡಲ್ಲಿಗೆ ಜೋತು ಬೀಳುವುದೇ ಸೈ. ಯಾರಾದರೂ ಪುಟ್ಟನನ್ನು ತಮ್ಮ ಕಾಲ ಮೇಲೆ ಕೂರಿಸಿಕೊಳ್ಳಲು ಕರೆದರೂ ಅಮ್ಮ ಬಿಡುತ್ತಿರಲಿಲ್ಲ. ಅವರೇನಾದರೂ ಕುತೂಹಲಕ್ಕೆಂದು ಪ್ರಶ್ನೆಯನ್ನು ಕೇಳಿದರೇ, ಸಹಾನುಭೂತಿಯನ್ನು ತೋರಿದರೇ... ಈ ರೇ ಗಳ ಕಾಟವೇ ಬೇಡ ಎನ್ನುವ ಮನಸ್ಥಿತಿ ಅಮ್ಮನದು. ಪುಟ್ಟನಿಗೂ ಅಷ್ಟೇ ಅಮ್ಮನ ಸಾನ್ನಿಧ್ಯವೇ ಇಷ್ಟ. ಅಮ್ಮನ ಕುತ್ತಿಗೆಯನ್ನು ಗಟ್ಟಿಯಾಗಿ ತಬ್ಬಿ ಹಿಡಿದುಕೊಂಡು ಸುಮ್ಮನೆ ಹೊರಗಡೆ ನೋಡುತ್ತಿದ್ದ.

ಅಂತೂ ಇಂತೂ ಇವರು ಇಳಿಯುವ ಸ್ಟೇಷನ್ ಬಂದೊಡನೆ ಧಾವಂತ ದಿಂದ ಇಳಿದು ಕ್ಲಿನಿಕ್ಕನ್ನು ಬೇಗನೆ ಸೇರಿಕೊಳ್ಳುವ ತವಕ. ಅಲ್ಲಿ ಸೇರಿರುವ ಜನರೆಲ್ಲಾ ಪುಟ್ಟನ ಪರಿಚಯದವರೇ. ಇವನ ಓರಗೆಯ ಮಕ್ಕಳು, ಅಂಕಲ್ ಆಂಟಿಯಂದಿರು, ಅಜ್ಜ ಅಜ್ಜಿಯಂದಿರು, ಹೀಗೆ ಎಲ್ಲಾ ವಯಸ್ಸಿನವರೂ ತಮ್ಮ ಏನೇನೋ ತೊಂದರೆಗಳಿಗೆ ಪರಿಹಾರವನ್ನು ಹುಡುಕಿಕೊಂಡು ಬರುತ್ತಿದ್ದರು. ದಿನಾಲು ಸಿಗುವವರು ಎಂದಮೇಲೆ ಪರಸ್ಪರ ಮುಗುಳ್ನಗುವಿನ ವಿನಿಮಯ, ಮಾತುಕತೆ ನಡೆಯುತ್ತಿತ್ತು. "ಕಾರ್ತಿಕ್"ಎಂದು ಸಿಸ್ಟರ್ ಆಂಟಿ ಕೂಗಿ ಕರೆದೊಡನೆ ಅಮ್ಮ ಅವನನ್ನು ಎತ್ತಿಕೊಂಡು ಒಳಗೆ ನಡೆಯುತ್ತಾಳೆ. ಸ್ವಲ್ಪ ಸಣ್ಣಗಾಗುವ ಮಗನ ಮುಖವನ್ನು ನೋಡಿ, ನಾನಿದ್ದೇನೆ ಹೆದರಬೇಡ ಎನ್ನುವಂತೆ ಅವನ ಬೆನ್ನಮೇಲೆ ಕೈಯಾಡಿಸುತ್ತಾಳೆ. ಒಳಗಡೆ ಕುರ್ಚಿಯೊಂದ ರಲ್ಲಿ ಕಾರ್ತಿಕನನ್ನು ಅಪ್ಪಿಹಿಡಿದು ಕುಳಿತುಕೊಳ್ಳುತ್ತಾಳೆ. "ಹಾಯ್ ಕಾರ್ತಿಕ್, ಹೌ ಆರ್ ಯು ಬೇಬಿ" ಎಂದು ನಗು ನಗುತ್ತ ತನ್ನನ್ನು ಮಾತನಾಡಿಸುತ್ತ ಬರುವ ಡಾಕ್ಟರ್ ಮಾಮಾನನ್ನು ನೋಡಿ ನಗಲೋ, ಅಥವಾ ತನಗೆ ಚುಚ್ಚಲೆಂದೇ ತಂದಿರುವ ಸೂಜಿಗಳನ್ನು ನೋಡಿ ಅಳಲೋ ಎಂದೇ ಪುಟ್ಟನಿಗೆ ಅರ್ಥವಾಗದು. ಮೊದಲ ದಿನ ಇಲ್ಲಿಗೆ ಬಂದಾಗ "ಈ ಡಾಕ್ಟರ್ ಮಾಮಾ ನಿನಗೆ ನಡೆದಾಡಲು ಕಲಿಸುತ್ತಾರೆ, ಸೂಜಿ ಚುಚ್ಚಿದಾಗ ನೋವಾದ್ರು ಅಳಬೇಡ" ಎಂದು ಅಮ್ಮ ಕಿವಿಯಲ್ಲಿ ಹೇಳಿದ ಮಾತುಗಳು ಅವನಿಗೆ ನೆನಪಿದೆ. ಅಪ್ಪ ಅಮ್ಮನ ಕೈ ಹಿಡಿದು ನಡೆದಾಡುವ ಆಸೆ, ಹಾರ್ದಿಕನೊಂದಿಗೆ ಶಾಲೆಗೆ ಹೋಗುವ ಆಸೆ, ಎಲ್ಲರಂತೆ ಕ್ರಿಕೆಟ್ ಆಡುವ ಆಸೆ .....ಕಂಗಳಲ್ಲಿ ತುಂಬಿರುವ ಇಂತಹ ನೂರಾರು ಆಸೆಗಳಿಗಾಗಿ ಸಾವಿರಾರು ಸೂಜಿಗಳನ್ನು ಕೂಡ ಚುಚ್ಚಿಸಿಕೊಳ್ಳಲು ತಯಾರಿದ್ದ ಅವನು. ಅಲ್ಲದೇ ಅಮ್ಮ ಗಟ್ಟಿಯಾಗಿ ಹಿಡಿದು ಕುಳಿತಿರುವಾಗ ಅವನಿಗೆ ಏನೋ ಧೈರ್ಯ, ಭರವಸೆ. ಮೊದಲ ದಿನ ಇಲ್ಲಿಗೆ ಬಂದು ಮನೆಗೆ ಹೋದ ಮೇಲೆ ಅಪ್ಪನಿಗೆ ಕ್ಲಿನಿಕ್‌ನಲ್ಲಿ ನಡೆದ ವಿಷಯವನ್ನೆಲ್ಲ ಹೇಳುವಾಗ ಅಮ್ಮ ತನಗೇ ಸೂಜಿ ಚುಚ್ಚಿದರೇನೋ ಎಂಬಂತೇ ಅಳುಮುಖ ಮಾಡಿಕೊಂಡಿದ್ದಳು.

ಆದಿನ ಟ್ರೀಟ್ಮೆಂಟ್ ಮುಗಿದು ಹೊರಗೆ ಬರುತ್ತಿರುವಾಗ ಅಮ್ಮ ಡಾಕ್ಟರರೊಡನೆ ಮಾತಿಗೆ ನಿಂತಳು. "ಡಾಕ್ಟರ್, ನೀವು ಹೇಳಿದಂತೆ ಕಾರ್ತಿಕನಿಗೆ ಯಾವುದೇ ಸ್ವೀಟ್ಸ್‌ನ್ನಾಗಲೀ, ಚಾಕಲೇಟ್ ಐಸ್ ಕ್ರೀಮ್ ಏನನ್ನೂ ಕೊಡ್ತಾ ಇಲ್ಲ. ಅವನು ಕೂಡ ಅವೆಲ್ಲ ಬೇಕೆಂದು ಹಠ ಮಾಡೋದಿಲ್ಲ. ಆದರೆ ನಾಳೆ ಅವನ ಬರ್ತಡೇ. ಅವನ ಗೆಳೆಯಂದಿರನ್ನೆಲ್ಲ ಕರೆದು ಆಚರಿಸಬೇಕು ಅಂತ ಆಸೆ. ನಾಳೆ ಟ್ರೀಟ್‌ಮೆಂಟಿಗೆ ಬರೋದಿಕ್ಕೆ ಆಗೋದಿಲ್ಲ. ಅಲ್ಲದೇ ನಾಳೆ ಒಂದಿನ ಅವಂಗೆ ಕೇಕ್, ಐಸ್‌ಕ್ರೀಮ್, ಚಾಕ್‌ಲೇಟ್ ಎಲ್ಲಾ ಕೊಡಬಹುದಾ?" ಅಮ್ಮನ ಮಾತನ್ನು ಕೇಳಿ ಕಾರ್ತಿಕನಿಗೆ ಕುಣಿದಾಡುವಷ್ಟು ಖುಷಿ. ಆದರೆ ಡಾಕ್ಟರ್ ಮಾಮಾ ಏನು ಹೇಳ್ತಾರೊ ಎನ್ನುವ ಆತಂಕ. ತನ್ನ ಗೆಳೆಯರ ಹುಟ್ಟು ಹಬ್ಬದ ಸಂಭ್ರಮವನ್ನು ನೋಡುತ್ತಿದ್ದ ಅವನಿಗೆ ತನ್ನ ಬರ್ತ್‌ಡೇಯನ್ನು ಕೂಡ ಹಾಗೇ ಆಚರಿಸುವ ಹಂಬಲ.

"ಓಕೆ, ನಾಳೆ ಒಂದಿನ ಮಾತ್ರ ಅವನಿಗೆ ಏನ್ಬೇಕೋ ಕೊಡಿ, ಒಂದು ದಿನ ಮಾತ್ರ."ಎಂದು ಅಮ್ಮನಿಗೆ ಹೇಳಿದ ಡಾಕ್ಟರ್ "ಹಾಯ್ ಕಾರ್ತಿಕ್. ಮುಂದಿನ ವರ್ಷದ ಬರ್ತ್‌ಡೇಗೆ ನೀನು ನಡೆದುಕೊಂಡು ಬಂದು ಸ್ವೀಟ್ ಕೊಟ್ಟು ಹೋಗಬೇಕು ಆಯ್ತಾ" ಎಂದರು. ಅಮ್ಮ ಹಾಗೂ ಮಗನ ಮುಖದ ಮೇಲೆ ನಗೆಯ ಹೊನಲು, ಹೊಳೆ. " ಥ್ಯಾಂಕ್ಯೂ ಡಾಕ್ಟರ್"ಎಂದು ಕ್ಲಿನಿಕ್‌ನಿಂದ ಹೊರಬಿದ್ದ ಅಮ್ಮ ಮನೆಗೆ ವಾಪಸ್ಸಾಗುತ್ತಿರುವಾಗಲೇ ಮಾರನೆಯ ದಿನದ ತಯಾರಿಗೆ ಸಾಮಾನುಗಳನ್ನು, ಮಗನಿಗೆ ಆಟಿಕೆಗಳನ್ನು ಖರೀದಿಸಿದಳು. ಮಗನ ಬರ್ತ್‌ಡೆಗೆ ಏನೆಲ್ಲ ಮಾಡಬೇಕು, ಯಾರನ್ನೆಲ್ಲ ಕರೆಯಬೇಕು ಎಂಬ ವಿಚಾರ ಅವಳ ತಲೆಯಲ್ಲಿ.

ಮನೆ ತಲುಪುವಾಗ ರಾತ್ರಿಯಾಗಿತ್ತು. ಮಾರನೆಯ ದಿನದ ಸಂಭ್ರಮದ ವಿಷಯವನ್ನು ಅಮ್ಮ ಮಗನಿಗೆ ಹೇಳುತ್ತಿದ್ದಳು. ಬೇಗ ಊಟ ಮಾಡಿದರೂ ಕಾರ್ತಿಕನಿಗೆ ನಿದ್ದೆ ಬಾರದು. ಒಂದೆಡೆ ನಾಳೆ ಅಮ್ಮ ಮಾಡಬಹುದಾದ ತಿಂಡಿ, ಅಡುಗೆಗಳ ಆಲೋಚನೆ, ಇನ್ನೊಂದಡೆ ತನ್ನ ಗೆಳೆಯರಿಗೆ ಹೊಸ ಆಟಿಗೆ ಸಾಮಾನುಗಳನ್ನೆಲ್ಲ ತೋರಿಸಬೇಕೆಂಬ ಸಂಭ್ರಮ. ಅಪ್ಪ ಏನು ಗಿಫ್ಟ್ ಕೊಡುತ್ತಾರೋ ಎಂಬ ಕುತೂಹಲ. ಒಂದೇ ಎರಡೇ ಎಷ್ಟೊಂದು ಖುಷಿ. ತನ್ನ ಬರ್ತ್‌ಡೇ ವಿಷಯ ತಿಳಿದು ಅಪ್ಪಂಗೆ ಎಷ್ಟೊಂದು ಖುಷಿ ಆಗಬಹುದು ಎನ್ನುವ ಯೋಚನೆ. ಅಮ್ಮ ಅಡಿಗೆ ಮನೆಯಿಂದ ಹೊರ ಬರುವಂತೇ ಕಾಣುತ್ತಿಲ್ಲ. ಕುಳಿತಲ್ಲೇ ತೂಕಡಿಕೆ ಬಂದ ಕಾರ್ತಿಕನ ಕನಸಿನ ಲೋಕದಲ್ಲಿ ಬಣ್ಣ ಬಣ್ಣದ ಚಾಕ್‌ಲೇಟ್, ರಂಗು ರಂಗಿನ ಕೇಕು, ಐಸ್‌ಕ್ರೀಮ್‌ಗಳೇ ತುಂಬಿದ್ದವು. ❍


## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
**S.B. A/c No. 520101249405926**
**IFS Code : UBINO904996**

2) **Havyaka Welfare Trust Women Welfare Cell**
**S.B. A/c No. 520101249405962**
**IFS CODE : UBINO904996**

**Donations to Havyaka welfare Trust' qualify for tax deduction under section 80 (G).**

